ವಿಜಯಪುರ | ಸಂಪುಟ 02 | ಸಂಚಿಕೆ 26 | ಪುಟ 4 | ₹ 3.00

https://udayarashminews.com

udayarashmi 7026028778

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಶುಕ್ರವಾರ, ಮಾರ್ಚ್ 15, 2024

"ರೈತರ ಯಾವ ಬೆಳೆಗೂ ಸ್ಥಿರ ಬೆಲೆ ಸಿಗುತ್ತಿಲ್ಲ. ಇದರಿಂದಾಗಿ ರೈತರು ಆರ್ಥಿಕ ಸಂಕಷ್ಟ ಎದುರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ರೈತರ ಬೆಳೆಗಳಿಗೆ ಯೋಗ್ಯ ಬೆಲೆ ನೀಡಬೇಕು. ದೇಶಕ್ಕೆ ಉತ್ತಮ ಪ್ರಧಾನಿ ಸಿಗುವವರೆಗೂ ರೈತರು ಸಂದಿಗ್ಧ ಪರಿಸ್ಥಿತಿಯಲ್ಲಿರುತ್ತಾರೆ."

– ಶಿವಾನಂದ ಪಾಟೀಲ

ಸಚಿವರು, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ & ಕೃಷಿ ಮಾರುಕಟ್ಟೆ

ಕಾಂಗ್ರೆಸ್ಗೆ ಸೋಲುವ ಭೀತಿ । ಸಚಿವರೂ ಸ್ಪರ್ಧಿಸಲು ಹಿಂದೇಟು । ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ವ್ಯಂಗ್ಯ

ಚುನಾವಣೆ ಸ್ಪರ್ಧೆಗೆ ಕಾಂಗ್ರೆಸ್‌ನಲ್ಲಿ ಅಭ್ಯರ್ಥಿಗಳಿಲ್ಲ :ಬೊಮ್ಮಾಯಿ

ಉದಯರಶ್ಮಿ ನ್ಯೂಸ್

ಬೆಂಗಳೂರು: ಲೋಕಸಭೆ ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಕಾಂಗ್ರೆಸ್ ನಿಂದ ಸ್ಪರ್ಧೆ ಮಾಡಲು ಅಭ್ಯರ್ಥಿಗಳು ಸಿಗುತ್ತಿಲ್ಲ. ಸಚಿವರೂ ಸ್ಪರ್ಧಿಸಲು ಹಿಂದೇಟು ಹಾಕುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಿನ್ನೆ ಪಕ್ಷದ ವರಿಷ್ಠರು ನಿರ್ಣಯ ಮಾಡಿ ಪ್ರಕಟಣೆ ಮಾಡಿದ್ದಾರೆ. ಸದಾಕಾಲ ರಾಜಕೀಯವಾಗಿ ಆಶೀರ್ವಾದ ಮಾಡಿ ಯಡಿಯೂರಪ್ಪ ಅವರು ಹರಸಿದ್ದಾರೆ. ಅವರ ಆಶೀರ್ವಾದ ಪಡೆದಿದ್ದೇನೆ. ಪ್ರಚಾರಕ್ಕೂ ಕೂಡ ಬರುತ್ತೇನೆ ಅಂತ ಹೇಳಿದ್ದಾರೆ ಎಂದು ಹೇಳಿದರು.

ಈ ಬಾರಿ ಅಭ್ಯರ್ಥಿಗಳ ಆಯ್ಕೆ ವಿನೂತನ ರೀತಿಯಾಗಿದೆ. ಡಾ. ಮಂಜುನಾಥ್ ಅವರು ಲಕ್ಷಾಂತರ ಜನರಿಗೆ ಆರೋಗ್ಯ ಕಾಪಾಡಿದ್ದಾರೆ. ಒಳ್ಳೆಯ ಕೆಲಸ ಮಾಡಿದವರಿಗೆ ಪಕ್ಷ ಪುರಸ್ಕಾರ ನೀಡುತ್ತದೆ ಅನ್ನುವ ಸಂದೇಶ ನೀಡಿದೆ. ಮತ್ತೆ ಮಹಾರಾಜ ಯದುವೀರ ಒಡೆಯರ್ ಅವರಿಗೆ ಟಿಕೆಟ್ ನೀಡಿರುವುದು ದಕ್ಷಿಣ ಕರ್ನಾಟಕದಲ್ಲಿ ಒಳ್ಳೆಯ ಸಂದೇಶ ನೀಡಿದಂತಾಗಿದೆ.

ದಕ್ಷಿಣ ಭಾರತದಲ್ಲಿ ಅಭಿವೃದ್ಧಿ ಆಗಿದ್ದರೆ ಅದಕ್ಕೆ ಒಡೆಯರ್ ಅವರು ಕಾರಣ. ಅವರು ಹಿಂದುಳಿದ ವರ್ಗದವರ ಅಭಿವೃದ್ಧಿ ಮಾಡಿದ್ದಾರೆ. ಆ ಮನೆತನಕ್ಕೆ ಟಿಕೆಟ್ ನೀಡಿರುವುದು ದಕ್ಷಿಣ ಕರ್ನಾಟಕಕ್ಕೆ ಸಂತಸ ತಂದಿದೆ. ಹಳೆ ಬೇರು, ಹೊಸ ಚಿಗುರಿಗೂ ಅವಕಾಶ ನೀಡಿದೆ. ಈ ರೀತಿ ನಿರ್ಣಯ

ಬಿಜೆಪಿಯಲ್ಲಿ ಮಾತ್ರ ಸಾಧ್ಯ ಎಂದರು.

ಕಾಂಗ್ರೆಸ್ ನಲ್ಲಿ ಆ ಪರಿಸ್ಥಿತಿ ಇಲ್ಲ. ಸಚಿವರೂ ಸೋಲುವ ಭಯದಲ್ಲಿ ಇದ್ದಾರೆ. ಟಿಕೆಟ್ ಸಿಗದ ಸಂಸದರು ನಮ್ಮ ಸಂಪರ್ಕದಲ್ಲಿದ್ದಾರೆ ಅನ್ನುವುದು ಡಿಸಿಎಂ ಡಿಕೆಶಿವಕುಮಾರ್ ಅವರ ಚಾಳಿಯಾಗಿದೆ. ಅವರ ಪಕ್ಷದಲ್ಲಿ ಸ್ಪರ್ಧಿಸಲು ಅಭ್ಯರ್ಥಿಗಳು ಸಿಗುತ್ತಿಲ್ಲ ಎಂದು ಕುಟುಕಿದರು.

ರಾಜ ನುಡಿ

ಮೌನವು ಮಾತನ್ನು ಮೀರಿ ಮುಂದೆ ಹೋಗಬಲ್ಲುದು. ಹೀಗಾಗಿಯೇ ಇರಬೇಕು, ಪ್ರೀತಿಪಾತ್ರರಿಗೆ ನಿಮ್ಮ ಮೌನ ಬೇಗ ತಲುಪುತ್ತದೆ. ಅಪಾತ್ರರಿಗೆ ಮಾತು ಬೇಗ ತಲುಪುತ್ತದೆ.

–ಡಾ. ರಾಜಶೇಖರ ನಾಗೂರ

ವಚನ ಚಿಂತನ 132

ಅರಿವು ಮರವೆಗೊಳಗಾದ ಆತ್ಮನ ತಿಳಿ

ಉದಕವೊಂದರಲ್ಲಿ ತಂದು,
ವರ್ಣ ಭೇದಕ್ಕೆ ಹಲವಾದ ತೆರನಂತೆ,
ಆತ್ಮ ನಾನೆಂಬುದ ಮರೆದು,
ಸರ್ವರಲ್ಲಿ ಬೆರಸುವ ಚಿತ್ತ ಒಂದೋ, ಎರಡೋ ?
ನೆಲಜಲ ಒಂದಾದಡೆ, ಬೆಳೆವ ವೃಕ್ಷ ಹಲವಾದ ತೆರದಂತೆ, ಅರಿವು ಮರವೆಗೊಳಗಾದ ಆತ್ಮನ ತಿಳಿದಲ್ಲಿ, ಬೇರೊಂದೆಡೆಗೆ ತೆರಪಿಲ್ಲ, ಮನಸಂದಿತ್ತು ಮಾರೇಶ್ವರಾ.
– ಮನಸಂದ ಮಾರಿತಂದೆಯವರು

ಈ ಜಗತ್ತಿನಲ್ಲಿರುವ ದುಃಖ ದುಮ್ಮಾನಗಳಿಗೆ ಮೂಲಕಾರಣವನ್ನು ಮನಸಂದ ಮಾರಿತಂದೆಯವರು ಈ ವಚನದಲ್ಲಿ ಕಂಡುಕೊಂಡಿದ್ದಾರೆ. ಆತ್ಮ ಮತ್ತು ಪರಮಾತ್ಮಗಳು ಬೇರೆ ಎಂಬ ಭಾವನೆಯಿಂದ ನೋಡುವವರಿಗೆ ಪ್ರತಿ ಜೀವಿ/ವ್ಯಕ್ತಿಯೂ ಬೇರೆಯಾಗಿ ಕಾಣುತ್ತವೆ. ಪರಿಣಾಮವಾಗಿ ಹೋಲಿಕೆ ಪ್ರಾರಂಭವಾಗುತ್ತದೆ. ಹೋಲಿಕೆಯು ವ್ಯಕ್ತಿಯಲ್ಲಿ ಖಿನ್ನತೆ ಅಥವಾ ಅಹಂಕಾರವನ್ನು ತುಂಬುತ್ತದೆ. ಇದು ದುಃಖಕ್ಕೆ ದಾರಿಯಾಗುತ್ತದೆ. ಆತ್ಮ ಮತ್ತು ಪರಮಾತ್ಮ ಒಂದೇ ಎಂದು ಅರಿತಾಗ ತಾನು ಇತರರಿಗಿಂತ ಭಿನ್ನ ಎನ್ನುವ ಭಾವನೆ ಕಡಿಮೆಯಾಗುತ್ತದೆ. ಇತರರ ನೋವು ನಲಿವುಗಳು ತನ್ನ ನೋವು ನಲಿವು ಎಂಬ ಭಾವನೆ ಉಂಟಾಗುತ್ತದೆ ಇವರಿಗೆ ಸರ್ವವು ಸುಂದರವಾಗಿರುತ್ತದೆ. ಇಲ್ಲಿ ಆತ್ಮ (ಲಿಂಗ) ಮತ್ತು ಪರಮಾತ್ಮ (ಮಹಾಲಿಂಗ)ಗಳು ಒಂದೇ, ಆದರೆ ತೋರಿಕೆಯಲ್ಲಿ ಭಿನ್ನವಾಗಿರುತ್ತವೆ ಎನ್ನುವುದಕ್ಕೆ ಉತ್ತಮವಾದಂತಹ ಹೋಲಿಕೆಯನ್ನು ನೀಡಿದ್ದಾರೆ. ಒಬ್ಬ ಚಿತ್ರಕಾರನು ತನ್ನ ಚಿತ್ರರಚನೆಗೆ ವಿವಿಧ ಬಣ್ಣಗಳನ್ನು ಬಳಸುತ್ತಾನೆ. ಎಲ್ಲ ಬಣ್ಣಗಳ ತಯಾರಿಕೆಗೆ ಬಳಕೆಯಾಗುವ ಬಣ್ಣರಹಿತ ನೀರು ಒಂದೇ ಆದರೂ ವಿವಿಧ ಬಣ್ಣಗಳನ್ನು ತನ್ನೊಳಗೆ ಅಡಗಿಸಿಕೊಂಡು ವಿಭಿನ್ನ ರೂಪದಲ್ಲಿ ಗೋಚರಿಸುವಂತೆ. ಮಹಾಲಿಂಗವು ವಿವಿಧ ಜೀವಿಗಳಲ್ಲಿ ಪ್ರಾಣಲಿಂಗವಾಗಿ ಚೈತನ್ಯಸ್ವರೂಪದಲ್ಲಿದೆ. ನೆಲಜಲ ಒಂದಾದಾಗ ವಿವಿಧರೀತಿಯ ಸಸ್ಯಗಳು ಉಗಮ ವಾದರೂ ಅವುಗಳಿಗೆಲ್ಲ ಮೂಲವಾದ ಚೈತನ್ಯವು ಒಂದೇ ಎಂಬ ಅರಿವು ಆತ್ಮಜ್ಞಾನವನ್ನು ನೀಡುತ್ತದೆ. ಆತ್ಮನ ತಿಳಿದಲ್ಲಿ, ಬೇರೊಂದೆಡೆಗೆ ತೆರಪಿಲ್ಲ,

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

ಚಿಮ್ಮಲಗಿ ಏತ ನೀರಾವರಿಗೆ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರಕ್ಕೆ ಸಂಗಮೇಶ ಸಗರ ಆಗ್ರಹ

ಕೋರ್ಟ ಆದೇಶವಾದರೂ ಪರಿಹಾರ ನೀಡದ ಅಧಿಕಾರಿಗಳು

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲೆಯಲ್ಲಿ ಚಿಮ್ಮಲಗಿ ಏತ ನೀರಾವರಿ ಯೋಜನೆಯಡಿ ಜಮೀನು ಕಳೆದುಕೊಂಡು 4–5 ವರ್ಷಗಳೆ ಕಳೆದರೂ ರೈತರಿಗೆ ಇಲ್ಲಿಯವರೆಗೆ ಪರಿಹಾರ ಬಂದಿರುವುದಿಲ್ಲ, ಕೋರ್ಟಿನ ಮುಖಾಂತರ ಹೋರಾಟ ಮಾಡಿ ಕೋರ್ಟಿನ ಆದೇಶದಂತೆ ಕೂಡಲೇ ಹೆಚ್ಚುವರಿ ಅವಾರ್ಡನ ಹಣ ಹಾಗೂ ಬಡ್ಡಿ ಹಾಕಿಕೊಡಬೇಕೆಂದು ಆದೇಶವಾಗಿದ್ದರೂ ಇಲ್ಲಿಯವರೆಗೆ ಯಾವುದೋ ಸಬೂಬು ಹೇಳಿ ರೈತರಿಗೆ ಅನ್ಯಾಯ, ಆರ್ಥಿಕ ಹೊಣೆ ಹಾಗೂ ಸಮಯ ಮಾಡುತ್ತಿರುವುದರಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಎದ್ದುಕಾಣುತ್ತಿದೆ ಎಂದು ರೈತಸಂಘದ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಆರೋಪಿಸಿದರು.

ಇನ್ನಾದರೂ ಕೆ.ಬಿ.ಜೆ.ಎನ್.ಎಲ್. ಉಪ ಮುಖ್ಯ ಅಭೀಯಂತರ ಸುರೇಶ

ಹಯಾಳ ಅವರು ಕೂಡಲೇ ರೈತರ ಹಣ ಮಂಜೂರು ಮಾಡುವಂತೆ ಸಂಗಮೇಶ ಸಗರ ಅವರು ಮನವಿ ಸಲ್ಲಿಸಿ ಆಗ್ರಹಿಸಿದರು.

ರೈತರು ತಮ್ಮ ಬೆಲೆಬಾಳುವ ಒಳ್ಳೆಯ ಫಲವತ್ತಾದ ಭೂಮಿಯನ್ನು ಚಿಮ್ಮಲಗಿ ಏತನೀರಾವರಿ ಯೋಜನೆಯ ಕಾಲುವೆಗೆ ಬಿಟ್ಟುಕೊಟ್ಟು 4–5 ವರ್ಷಗಳೇ ಕಳೆದಿವೆ. ಇಲ್ಲಿಯವರೆಗೆ ಅವರಿಗೆ ಭೂ–ಪರಿಹಾರ ಬಂದಿರುವುದಿಲ್ಲ, ಇನ್ನು ಹೆಚ್ಚುವರಿ ಅವಾರ್ಡಗಾಗಿ ಸಾಲಸೋಲಮಾಡಿ ಕೋರ್ಟನ ಮುಖಾಂತರ ಹೋರಾಡಿ ಕೋರ್ಟ ಆದೇಶ ಮಾಡಿ ವರ್ಷಗಳೆ ಕಳೆದರೂ ಇಲ್ಲಿಯವರೆಗೆ ಒಂದು ನಯಾಪೈಸೆ ಹಣಕೂಡಾ ಬಂದಿರುವುದಿಲ್ಲ ಎಂಬುದು ರೈತರ ಅಳಲಾಗಿದೆ, ಕೂಡಲೇ ನಷ್ಟಗೊಂಡ ರೈತರಿಗೆ ಪರಿಹಾರ ನೀಡಬೇಕು ಇಲ್ಲವಾದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಕೆ.ಬಿ.ಜೆ.ಎನ್.ಎಲ್ ಕಚೇರಿ ಮುತ್ತಿಗೆ ಹಾಕಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಈ ವೇಳೆ ನಿಡಗುಂದಿ ತಾಲೂಕಾ ಅಧ್ಯಕ್ಷ ಡಾ ಕೆ..ಎಂ. ಗುಡ್ಡಾಳ, ಗೌರವಾಧ್ಯಕ್ಷ ಅಲ್ಲಾಭಕ್ಷ ಲಕ್ಷರಿ, ನಗರ ಘಟಕದ ಪ್ರಧಾನ ಕಾರ್ಯದರ್ಶಿ ಮೋತಿಲಾಲ ಉಣ್ಣಿಭಾವಿ, ಮುಖಂಡರಾದ ಸಂತೋಷ ಪೂಜಾರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಂಸದ ಅನಂತಕುಮಾರ ಕ್ಷಮೆ ಯಾಚನೆಗೆ ಕಾನಿಪ ಆಗ್ರಹ

ಉದಯರಶ್ಮಿ ನ್ಯೂಸ್

ಸಿಂದಗಿ: ಉತ್ತರ ಕನ್ನಡದ ಸಂಸದ ಅನಂತಕುಮಾರ ಹೆಗಡೆ ಅವರು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಹಿಲ್ಲೂರು ಗ್ರಾಮದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡುತ್ತಾ ಮಾಧ್ಯಮದವರನ್ನು ಹೀಯಾಳಿಸಿರುವುದು ಖಂಡನೀಯ ಎಂದು ಕಾನಿಪ ಸಂಘದ ತಾಲೂಕಾಧ್ಯಕ್ಷ ಆನಂದ ಶಾಬಾದಿ ಹೇಳಿದರು.

ಪಟ್ಟಣದ ತಾಲೂಕು ಆಡಳಿತ ಕಛೇರಿಯಲ್ಲಿ ಕಾನಿಪ ತಾಲೂಕು ಘಟಕದ ವತಿಯಿಂದ ತಹಶೀಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಅವರು,

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮಾಧ್ಯಮ ರಂಗವು ತನ್ನದೇಯಾದ ಮಹತ್ವದ ಸ್ಥಾನವಿದೆ. ತಮಗೆ ಬೇಕಾದಾಗ ಮಾಧ್ಯಮ

ಕ್ಷೇತ್ರವನ್ನು ಹೊಗಳುವುದು ಬೇಡವಾದಾಗ ತೆಗಳುವುದು ಕೆಲವು ರಾಜಕಾರಣಿಗಳಿಗೆ ಪರಿಪಾಠವಾಗಿದೆ. ಇಂತಹ ಘಟನೆಗಳು ಮರುಕಳಿಸದಂತೆ ಕಠಿಣ ಕಾನೂನನ್ನು ಜಾರಿಗೆ ತರಬೇಕು ಎಂದು ಕಾರ್ಯನಿರತ ಪತ್ರಕರ್ತರ ಸಂಘ ಒತ್ತಾಯಿಸುತ್ತದೆ. ಅನಂತಕುಮಾರ ಹೆಗಡೆ ಅವರು ಜವಾಬ್ದಾರಿಯುತ ಸಂಸದರಾಗಿದ್ದು, ಮಾಧ್ಯಮದವರನ್ನು ಗುರಿಯಾಗಿಸಿಕೊಂಡು ಹೇಳಿಕೆ ನೀಡಿರುವುದನ್ನು ಬಿಜೆಪಿ ಪಕ್ಷ ಗಂಬೀರವಾಗಿ ಪರಿಗಣಿಸಿ ಕ್ರಮಕೈಗೊಳ್ಳಬೇಕು. ಇಲ್ಲದಿದ್ದರೆ ಅವರನ್ನು ಸಾರಾಸಗಟವಾಗಿ ಮಾಧ್ಯಮದವರು ಬಹಿಷ್ಕರಿಸುವ ನಿರ್ಣಯ ಕೈಗೊಳ್ಳುವುದು ಅನಿವಾರ್ಯವಾಗುತ್ತದೆ. ಇದು ಇತರೆ ರಾಜಕಾರಣಿಗಳಿಗೆ ಒಂದು ಪಾಠವಾಗಲಿ. ಕೂಡಲೇ ಅವರು ಬೇಷರತ್ತಾಗಿ ಬಹಿರಂಗವಾಗಿ ಕ್ಷಮೆ ಯಾಚಿಸಬೇಕು ಎಂದು ಸಿಂದಗಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಆಗ್ರಹಿಸುತ್ತದೆ ಎಂದರು.

ಈ ವೇಳೆ ಕಾನಿಪ ಸಂಘದ ಉಪಾಧ್ಯಕ್ಷ ಮಲ್ಲಿಕಾರ್ಜುನ ಅಲ್ಲಾಪೂರ, ಪ್ರಧಾನ ಕಾರ್ಯದರ್ಶಿ ಭೀಮು ಕೆಂಭಾವಿ, ಖಜಾಂಚಿ ವಿಜಯಕುಮಾರ ಪತ್ತಾರ, ಸದಸ್ಯರಾದ ರಮೇಶ ಪೂಜಾರ, ರವಿಚಂದ್ರ ಮಲ್ಲೇದ, ಸುದರ್ಶನ ಜಂಗಣ್ಣಿ, ಮಹಾಂತೇಶ ನೂಲಾನವರ, ಶಿವಾನಂದ ಆಲಮೇಲ, ಇಸ್ಮಾಯಿಲ್ ಶೇಖ್, ಗುಂಡು ಕುಲಕರ್ಣಿ, ಭೋಜರಾಜ ದೇಸಾಯಿ, ವಿಶ್ವಪ್ರಕಾಶ ಮಲಗೊಂಡ, ನವೀನ ಶೆಳ್ಳಗಿ, ನಾಗೇಶ ತಳವಾರ, ಸಲೀಂ ಮರ್ತೂರ ಸೇರಿದಂತೆ ಅನೇಕರು ಇದ್ದರು.

ಅಂಬೆ ಬೆಳೆಗಳ ರಕ್ಷಣೆಗೆ ಕ್ರಮ: ಶಾಸಕ ಯಶವಂತರಾಯಗೌಡ

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲೆಯಲ್ಲಿ ಬರದ ಛಾಯೆ ಆವರಿಸಿದ್ದು ಇಂಡಿ ಭಾಗದಲ್ಲಿ ಅತೀ ಹೆಚ್ಚು ಲಿಂಬೆ ಬೆಳಗಾರರಿದ್ದಾರೆ. ರೈತರ ಲಿಂಬೆ ಗಿಡಗಳನ್ನು ರಕ್ಷಿಸಲು ನಾವು ಮುಂದಾಗಬೇಕು ಎಂದು ಇಂಡಿ ಶಾಸಕರಾದ ಯಶವಂತರಾಯಗೌಡ ಪಾಟೀಲ್ ಹೇಳಿದರು.

ಗುರುವಾರ ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಲಿಂಬೆ ಅಭಿವೃದ್ಧಿ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಭಾಗದಲ್ಲಿ ನೀರಿನ ಮಟ್ಟ ಕುಸಿದಿದ್ದು ರೈತರು ನೀರಿನ ಅಭಾವದಿಂದ ಲಿಂಬೆ ಬೆಳೆಗಳನ್ನು ರಕ್ಷಿಸಲು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಅಧಿಕಾರಿಗಳು ಈ ಭಾಗದ ರೈತರ ಜಮೀನುಗಳಿಗೆ ಖುದ್ದಾಗಿ ಭೇಟಿ ನೀಡಿ ರೈತರ ನಿಜ ಸ್ಥಿತಿ ಅರಿಯಬೇಕು. ನಿಖರ ಮಾಹಿತಿ ಪಡೆದು ಲಿಂಬೆ ಬೆಳೆ ರಕ್ಷಣೆ ಮುಂದಾಗಬೇಕು ಅಧಿಕಾರಿಗಳು ಪಡೆದ ಮಾಹಿತಿಯನ್ನು ಲಿಂಬೆ ಅಭಿವೃದ್ಧಿ ಮಂಡಳಿ ವತಿಯಿಂದ ಸರ್ಕಾರಕ್ಕೆ ವರದಿಯನ್ನು ಕಳುಹಿಸಿ ತಕ್ಷಣ ಕ್ರಮ ವಹಿಸುವಂತೆ ಜಿಲ್ಲಾಡಳಿತ ಹಾಗೂ ನಾವುಗಳು ಕೂಡಿ 50 ಲಕ್ಷ ರೂಗಳ ಅನುದಾನ ಬಿಡುಗಡೆಗೆ ಕ್ರಮ ವಹಿಸೋಣ ಎಂದರು.

ಏಪ್ರಿಲ್ ಹಾಗೂ ಮೇ ಮಾಹೆಗಳಲ್ಲಿ ಬಿಸಿಲಿನ ತಾಪ ಹೆಚ್ಚಾಗುವುದು ಕಾರಣ ಈಗಿನಿಂದಲೆ ರೈತರ ಸಹಾಯಕ್ಕೆ ಮುಂದಾಗಬೇಕು., ರೈತರು ಬೆಳೆದ ಲಿಂಬೆ ಬೆಳೆಗಳನ್ನು ಹೇಗಾದರು ಮಾಡಿ ಉಳಿಸಿಕೊಳ್ಳೋಣ ಒಮ್ಮೆ ಗಿಡ ಒಣಗಿದರೆ ಮತ್ತೆ ಲಿಂಬೆ ಬೆಳೆಯಬೇಕಾದರೆ ಸುಮಾರು 5ರಿಂದ 6 ವರ್ಷಗಳ ಕಾಲ ಕಾಯಬೇಕು. ಲಿಂಬೆ ಬೆಳರೀ ಭಾಗದ

ರೈತರ ಜೀವನಾಡಿಯಾಗಿದೆ. ಈ ಭಾಗದ ಲಿಂಬೆಗೆ ವಿಶೇಷ ಗುಣಮಟ್ಟದ ಹೊಂದಿದ್ದು, ಲಿಂಬೆ ಬೆಳೆಗಾರರಿಗೆ ಒಳ್ಳೆಯ ಮಾರುಕಟ್ಟೆ ಸೌಲಭ್ಯ ಉತ್ತಮ ದರವನ್ನು ಒದಗಿಸಲು ಕ್ರಮ ವಹಿಸಬೇಕು. ಇಂಡಿ ಕಚೇರಿಯಲ್ಲಿ ಸಿಬ್ಬಂದಿಗಳ ಕೊರತೆ ಇದ್ದು ಆದಷ್ಟು ಬೇಗ ಬೇರೆ ಬೇರೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ನಿಯೋಜಿಸುವಂತೆ ಸಭೆಯಲ್ಲಿ ತಿಳಿಸಿದರು.

ಕುಡಿಯುವ ನೀರಿನ ಸಭೆ:

ಜಿಲ್ಲೆಯಲ್ಲಿ ಅತೀ ನೀರಿನ ತೊಂದರೆ ಅನುಭವಿಸುತ್ತಿರುವ ಗ್ರಾಮಗಳಿಗೆ, ಜನ ಜಾನುವಾರುಗಳಿಗೆ ನೀರಿನ ಸೌಲಭ್ಯ ಒದಗಿಸಲು ಪ್ರಥಮ ಆದ್ಯತೆ ನೀಡಬೇಕು. ಕುಡಿಯುವ ನೀರಿನ ವಿಷಯದಲ್ಲಿ ಜಿಲ್ಲಾಡಳಿತವು ತಮ್ಮದೇ ಆದ ನಿರ್ಣಯಗಳನ್ನು ಪಾಲಿಸಬೇಕು. ತಾರತಮ್ಯ ಆಗದಂತೆ ನೋಡಿಕೊಳ್ಳಬೇಕು. ಕಟ್ಟ ಕಡೆಯ ವ್ಯಕ್ತಿಗೂ ನೀರು ದೊರಕಿಸಿ ಕೊಡುವಂತೆ ಕ್ರಮ ವಹಿಸಬೇಕು. ತಡವಲಗ, ಅಥರ್ಗಾ ಹಾಗೂ ನಿಂಬಾಳ ಕೆರೆಗಳಿಗೆ ನೀರು ಹರಿಸಿದಲ್ಲಿ ಈ ಭಾಗದ ಜನ– ಜಾನುವರುಗಳಿಗೆ ಕುಡಿಯುವ ನೀರಿನ ಅನುಕೂಲವಾಗಲಿದೆ ಎಂದು ಅವರು ಹೇಳಿದರು.

ನಾಗಠಾಣ ಮತಕ್ಷೇತ್ರದ ಶಾಸಕರಾದ ವಿಠ್ಠಲ ಕಟಕದೊಂಡ ಮಾತನಾಡಿ, ನಾಗಠಾಣ ಹಾಗೂ ಜಂಬಗಿ ಕೆರೆಗಳಿಗೆ ನೀರು ಹರಿಸಿದರೆ ಈ ಭಾಗದ ಜನ–ಜಾನುವಾರಗಳಿಗೆ ನೀರಿನ ತೊಂದರೆ ನೀಗಿಸಬಹುದಾಗಿದೆ ಅಧಿಕಾರಿಗಳು ಕ್ರಮ ವಹಿಸುವಂತೆ ಕೋರಿದರು.

ಜಿಲ್ಲಾಧಿಕಾರಿ ಟಿ.ಭೂಬಾಲನ್ ಮಾತನಾಡಿ, ಈಗಾಗಲೇ ಕುಡಿಯುವ ನೀರಿನ ಕುರಿತು ಸಾಕಷ್ಟು ಮುಂಜಾಗೃತೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಅತೀ ತೊಂದರೆಗೊಳಗಾದ ಗ್ರಾಮಗಳಿಗೆ ಟ್ಯಾಂಕರಗಳ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆ ಜಿಲ್ಲೆಯಲ್ಲಿ ಜನ–ಜಾನುವಾರುಗಳಿಗೆ ನೀರಿನ ತೊಂದರೆಯಾಗದಂತೆ ಹೆಚ್ಚಿನ ನಿಗಾ ವಹಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಿಷಿ ಆನಂದ, ಪೊಲೀಸ್ ವರಿಷ್ಠಾಧಿಕಾರಿಗಳಾದ ಋಷಿಕೇಶ ಸೋನಾವಣೆಟಿಜಜಿಟಿಜಜ, ಅಪರ ಜಿಲ್ಲಾಧಿಕಾರಿ ಮಹದೇವ ಮುರಗಿ, ಇಂಡಿ ಉಪವಿಭಾಗಾಧಿಕಾರಿಗಳಾದ ಅಬೀದ ಗದ್ಯಾಳ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಕೃಷ್ಣಾ ಭಾಗ್ಯ ಜಲ ನಿಗಮದ ಅಧಿಕಾರಿಗಳು, ನೀರಾವರಿ ಇಲಾಖೆ ಅಧಿಕಾರಿಗಳು ರೈತರು ಹಾಗೂ ಇತರರು ಉಪಸ್ಥಿತರಿದ್ದರು.

ಸಿದ್ದಲಿಂಗ ಫೈನ್ ಆರ್ಟ್ ಸೊಸೈಟಿಯಿಂದ ಚಿತ್ರಕಲಾ ಪ್ರದರ್ಶನ ಮತ್ತು ಕಲಾ ಪ್ರಾತ್ಯಕ್ಷತೆ

ಆದರ್ಶ ಕಲಾ ಸಂಘಟಕ ದಿ.ಕಾಚಾಪುರ :ಮಗಿಮಠ

ಉದಯರಶ್ಮಿ ನ್ಯೂಸ್

ವಿಜಯಪುರ. ನಾಡಿನ ಹಿರಿಯ ಚಿತ್ರಕಲಾವಿದರಾದ ದಿವಂಗತ ಸಿ.ಬಿ.ಕಾಚಾಪುರ ಅವರ ಪುಣ್ಯ ಸ್ಮರಣೆ ಪ

'ಕಲಾ ವಿಕಾಸ ಪುರಸ್ಕಾರ' ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಉದಯರಶ್ಮಿ ನ್ಯೂಸ್

ಗದಗ: ಕಲಾವಿದರ ಮತ್ತು ಕಲಾಪೋಷಕರ ಸಂಘಟನೆಯಾದ ಗದುಗಿನ ಕಲಾ ವಿಕಾಸ ಪರಿಷತ್ ಹಮ್ಮಿಕೊಂಡಿರುವ ಕಲಾ ವಿಕಾಸ ಉತ್ಸವ–2024 ಸಮಾರಂಭದಲ್ಲಿ ನೀಡುತ್ತಾ ಬಂದಿರುವ 24ನೇ ವರ್ಷದ ಪ್ರಶಸ್ತಿ, ಕಲಾ ವಿಕಾಸ ಪುರಸ್ಕಾರ ಪ್ರಶಸ್ತಿಗೆ ಶಾಸ್ತ್ರೀಯ ಸಂಗೀತ (ಗಾಯನ ವಾದನ, ಸುಗಮ ಸಂಗೀತ, ತತ್ವಪದ, ವಚನ ಗಾಯನ, ಜಾನಪದ ಸಂಗೀತ) ಕ್ಷೇತ್ರದಲ್ಲಿ ಮತ್ತು ಶಾಸ್ತ್ರೀಯ ನೃತ್ಯ (ಭರತನಾಟ್ಯ, ಕಥಕ್, ಕುಚುಪುಡಿ, ಮೊದಲಾದ ನೃತ್ಯ) ಪ್ರಕಾರದಲ್ಲಿ ಸಾಧನೆಗೈದ ಕಲಾವಿದರು ಅರ್ಜಿ ಸಲ್ಲಿಸಬಹುದಾಗಿದೆ.

ಈ ಪ್ರಶಸ್ತಿಯು ಗೌರವಧನ, ಪ್ರಶಸ್ತಿ ಫಲಕ, ನೆನಪಿನ ಕಾಣಿಕೆ, ಶಾಲು ಸತ್ಕಾರವನ್ನು ಒಳಗೊಂಡಿರುತ್ತದೆ. ಆಸಕ್ತ ಕಲಾವಿದರು ತಮ್ಮ ಸಂಪೂರ್ಣ ವಿವರ ಮತ್ತು ಕಲಾ ಪ್ರದರ್ಶನದ ವಿಡಿಯೋ ತುಣುಕುಗಳೊಂದಿಗೆ ಈ ವಾಟ್ಸಪ್ 9886717732 ನಂಬರಿಗೆ ಅಥವಾ ಇತಿರಚಿಜಚಿರ@ರಟಚಿಟ.ಛಿಠಟ ಈ ಇಮೇಲ್‌ಗೆ ಕಳಿಸಿಕೊಡಬಹುದಾಗಿದೆ.

ಪುರಸ್ಕಾರಕ್ಕೆ ಆಯ್ಕೆಯಾದ ಕಲಾವಿದರು ತಮ್ಮ ಕಲಾ ಪ್ರದರ್ಶನ ನಡೆಸಿಕೊಡುವುದು ಕಡ್ಡಾಯವಾಗಿರುತ್ತದೆ. ಎಂದು ಕಲಾವಿಕಾಸ ಪರಿಷತ್ ಅಧ್ಯಕ್ಷ ಸಿ. ಕೆ. ಹೆಚ್. ಶಾಸ್ತ್ರಿ (ಕಡಣಿ) ಇವರು ಪತ್ರಿಕಾ ಪ್ರಕಟಣೆಯ ಮೂಲಕ ವಿನಂತಿಸಿಕೊಂಡಿದ್ದಾರೆ.

ಆಲಗೂರ ಬೆಂಬಲಿಸಿ ದೇಸು ಚವ್ಹಾಣ ಕಾಂಗ್ರೆಸ್ ಸೇರ್ಪಡೆ

ಉದಯರಶ್ಮಿ ನ್ಯೂಸ್

ವಿಜಯಪುರ: ನಾಗಠಾಣ ಮತಕ್ಷೇತ್ರದ ನಾಗಠಾಣ ಬ್ಲಾಕ್ ಮಾಜಿ ಅಧ್ಯಕ್ಷ ದೇಸು ಗೇಮು ಚವ್ಹಾಣ ಇವರು ತಮ್ಮ ಬೆಂಬಲಿಗರೊಂದಿಗೆ ಕುಮಟಗಿ ಎಲ್.ಟಿ., ಆಹೇರಿ, ಮದಬಾವಿ, ಹಡಗಲಿ ಹಾಗೂ ಹಿಂದಿನ ಕಾಂಗ್ರೆಸ್ ಪಕ್ಷದ ಸದಸ್ಯರೊಂದಿಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಹಾಗೂ ವಿಜಯಪುರ ಲೋಕಸಭಾ ಚುನಾವಣಾ ಕಾಂಗ್ರೆಸ್ ಅಭ್ಯರ್ಥಿ ಪ್ರೊ.ರಾಜು ಆಲಗೂರ ರವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮರುಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ಪ್ರೊ. ರಾಜು ಆಲಗೂರ ರವರು ಮಾತನಾಡಿ, ನಾಗಠಾಣ ಬ್ಲಾಕ್ ಮಾಜಿ ಅಧ್ಯಕ್ಷರಾದ ದೇಸು ಗೇಮು ಚವ್ಹಾಣ ಇವರು ತಮ್ಮ ಬೆಂಬಲಿಗರೊಂದಿಗೆ ಕಾಂಗ್ರೆಸ್ ಪಕ್ಷಕ್ಕೆ ಮರುಸೇರ್ಪಡೆಗೊಂಡಿರುವುದು ನಾಗಠಾಣ ಮತ್ತು ವಿಜಯಪುರ ಲೋಕಸಭಾ ಮತಕ್ಷೇತ್ರದಲ್ಲಿ ಪಕ್ಷಕ್ಕೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ದೇಸು ಗೇಮು ಚವ್ಹಾಣ ಮಾತನಾಡಿ, ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳನ್ನು ಹಾಗೂ ಗ್ಯಾರಂಟಿ ಯೋಜನೆಗಳನ್ನು ಮೆಚ್ಚಿ ಗ್ರಾ.ಪಂ. ಸದಸ್ಯರಾದ ರಾಚು ಚವ್ಹಾಣ, ಅಪ್ಪು ಹೀರು ಪವಾರ, ದುಂಡು ದೇನು ಜಾಧವ, ಭಾವಸಿಂಗ ಜಾಧವ, ಸಂತೋಷ ಜಾಧವ, ರಾಜು ಜಾಧವ, ಧೋಂಡು ದೇನು ಜಾಧವ, ಸುರೇಶ ಡಿ. ಚವ್ಹಾಣ, ಸೇವು ತುಳಜು ನಾಯಕ, ಮಾನು ಕಾರಬಾರಿ, ಹೂನು ಚವ್ಹಾಣ, ಎಂ.ಎಂ. ಮುಲ್ಲಾ (ದ್ಯಾಬೇರಿ) ಪಾಂಡು ರಾಠೋಡ, ಧರ್ಮು ರಾಠೋಡ, ಎಂ.ವಾಯ್. ಹಲಗಣಿ ಇವರುಗಳೊಂದಿಗೆ ಮರಳಿ ಕಾಂಗ್ರೆಸ್ ಪಕ್ಷಕ್ಕೆ ಮರಳಿ ಸೇರ್ಪಡೆಗೊಂಡಿದ್ದೇನೆ ಅದರಂತೆ ಇನ್ನು ಮುಂದೆ ಜಿಲ್ಲೆಯ ಪ್ರಭಾವಿ ನಾಯಕರು ಹಾಗೂ ಇಬ್ಬರು ಸಚಿವರುಗಳ ಮತ್ತು ಶಾಸಕರುಗಳ ಮಾರ್ಗದರ್ಶನದಲ್ಲಿ ನಡೆದುಕೊಳ್ಳುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾದ ಚಾಂದಸಾಬ ಗಡಗಲಾವ, ಡಾ.ಗಂಗಾಧರ ಸಂಬಣ್ಣಿ, ಕೆಪಿಸಿಸಿ ಕಾರ್ಮಿಕ ವಿಭಾಗ ರಾಜ್ಯ ಪ್ರಧಾನ ಕಾರ್ಯದರ್ಶಿ ಮೀರಾಸಾಬ ಮುಲ್ಲಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ವಸಂತ ಹೊನಮೊಡೆ, ಹಾಜಿಲಾಲ ದಳವಾಯಿ, ಕೃಷ್ಣಾ ಲಮಾಣಿ ಮುಂತಾದವರು ಉಪಸ್ಥಿತರಿದ್ದರು.

ನೂತನ ಕ್ರೇಟಾ ಎನ್‌ಲೈನ್ ಎಸ್‌ಯುವಿ ಅನಾವರಣ

ಉದಯರಶ್ಮಿ ನ್ಯೂಸ್

ವಿಜಯಪುರ: ನಗರದ ನಾರಾಯಣ ಹುಂಡೈ ಷೋರೂಂನಲ್ಲಿ ನೂತನ ಕ್ರೇಟಾ ಎನ್‌ಲೈನ್ ಎಸ್‌ಯುವಿ ವಾಹನವನ್ನು ಅನಾವರಣಗೊಳಿಸಲಾಯಿತು.

ಆರ್‌ಟಿಓ ವಸಂತ ಚವ್ಹಾಣ, ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ರಾಜಕುಮಾರ ಹಿರೇಮಠ ಜಂಟಿಯಾಗಿ ನೂತನ ಕಾರನ್ನು ಅನಾವರಣಗೊಳಿಸಿದರು.

ನೂತನ ಕಾರಿನ ವೈಶಿಷ್ಟತೆ ಕುರಿತು ವಿವರಿಸಿದ ನಾರಾಯಣ ಹುಂಡೈ ಮುಖ್ಯಸ್ಥ ಗೋವಿಂದ ಜೋಶಿ ಮಾತನಾಡಿ, ಗ್ರಾಹಕರಿಗೆ ಅತ್ಯಾಧುನಿಕ ಸೌಕರ್ಯ ಒದಗಿಸಿ ಸುಖಕರ ಪ್ರಯಾಣಕ್ಕೆ ಹುಂಡೈ ಆದ್ಯತೆ ನೀಡಿದ್ದು, ಹೊಸ ಕ್ರೇಟಾ ಎನ್‌ಲೈನ್ ಅನೇಕ ವಿಶೇಷತೆಗಳನ್ನು ಹೊಂದಿದೆ, ಸ್ಪೋರ್ಟಿ ವಿನ್ಯಾಸ್, ಸ್ಪೀಡ್ ಮ್ಯಾನುವಲ್ ಗೇರಬಾಕ್ಸ್ ಹೀಗೆ ಅನೇಕ ರೀತಿಯ ಸೌಲಭ್ಯಗಳನ್ನು ಹೊಂದಿದೆ ಎಂದರು.

ನಾರಾಯಣ ಹುಂಡೈ ಮ್ಯಾನೇಜರ್ ಅಂಥೋನಿ, ಶಿವಕುಮಾರ ಕಮಲಾಕರ, ಸಂಜಯ ನಿಂಬಾಳಕರ, ವಿಜಯ ಜೋಶಿ ಮೊದಲಾದವರು ಪಾಲ್ಗೊಂಡಿದ್ದರು.

ಕೆಎಎಸ್ ಪರೀಕ್ಷಾ ಪೂರ್ವ ತರಬೇತಿ: ಅರ್ಜಿ ಆಹ್ವಾನ

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ವಿಜಯಪುರ ವತಿಯಿಂದ "ಸ್ಟಡಿ ಸರ್ಕಲ್ಸ್" ಕಾರ್ಯಕ್ರಮದ ಅಡಿಯಲ್ಲಿ ಮುಂಬರುವ ಕೆ.ಎ.ಎಸ್. ಹುದ್ದೆಗಳಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಆರ್ಯಭಟ ಕರಿಯರ್ ಅಕಾಡೆಮಿ (ರಿ), ಜೊಡ ಗುಮ್ಮಜ ಎದುರಿಗೆ, ಬಸ್ಟಾ□□ಂಡ್ ರೋಡ, ಮಿನಾಕ್ಷಿ ಚೌಕ, ವಿಜಯಪುರದಲ್ಲಿ ಮಾ.15ರಿಂದ ಮಾ.24ರವರೆಗೆ ಸ್ಪರ್ಧಾತ್ಮಕ ಪರೀಕ್ಷೆಯ ಪಠ್ಯಕ್ರಮಕ್ಕನುಸಾರವಾಗಿ ಉಚಿತ ತರಬೇತಿ ನೀಡಲು ಉದ್ದೇಶಿಸಲಾಗಿದೆ.

ಇದು ಉಚಿತ ತರಬೇತಿಯಾಗಿದ್ದು, ಹಾಜರಾಗಲು ಇಚ್ಛಿಸುವ ಅಭ್ಯರ್ಥಿಗಳು, ಕೆಪಿಎಸ್‌ಸಿ ನಲ್ಲಿ ಅಧಿಸೂಚಿತ ಕೆಎಎಸ್ ಹುದ್ದೆಗೆ ಸಲ್ಲಿಸಿದ ತಮ್ಮ ಅರ್ಜಿಯ ಪ್ರತಿ(ಝರಾಕ್ಸ್) ಹಾಗೂ ಆಧಾರ ಕಾರ್ಡ ಪ್ರತಿ(ಝರಾಕ್ಸ್) ನೊಂದಿಗೆ ಆಗಮಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಪ್ಲಾಟ್ ನಂ.55, ಕೆ.ಎಚ್.ಬಿ. ಕಾಲೋನಿ, ಸರ್ಕಾರಿ ಪ್ರಾಥಮಿಕ ಶಾಲೆ ನಂ.24 ಹತ್ತಿರ ಸೋಲಾಪೂರ ರಸ್ತೆ, ವಿಜಯಪುರ ಅಥವಾ ದೂರವಾಣಿ ಸಂಖ್ಯೆ 08352–250383, 9071055557, 7349601061, 9880716083ಕ್ಕೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀರಿನ ಸಮಸ್ಯೆಗೆ ಸಹಾಯವಾಣಿ ಆರಂಭ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಬೇಸಿಗೆ ಕಾಲ ಪ್ರಾರಂಭವಾಗಿರುವದರಿಂದ ತಾಲೂಕಿನಾದ್ಯಂತ ಕುಡಿಯುವ ನೀರಿನ ಸಮಸ್ಯೆ ಉಂಟಾದಲ್ಲಿ ತಕ್ಷಣ ಸ್ಪಂದನೆಗಾಗಿ ತಾಲೂಕು ಪಂಚಾಯತ ಕಾರ್ಯಾಲಯದ ವತಿಯಿಂದ ಸಹಾಯವಾಣಿಯನ್ನು ಪ್ರಾರಂಭಿಸಲಾಗಿದೆ. ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳುವಂತೆ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ. ಸಹಾಯವಾಣಿ ಸಂಖ್ಯೆ – 08356200606

ನನ್ನ ಬಡತನ ಹಸಿವು ಅವಮಾನಗಳೆ, ನಾನು ಬರಹಗಾರನಾಗಲು ಮೂಲ ಕಾರಣ: ಡಾ.ಲೋಕೇಶ್ ಅಗಸನಕಟ್ಟೆ

ಇನ್‌ಬಾಕ್ಸ್

– ಸಿದ್ಧಾಪುರ ಶಿವಕುಮಾರ್
ಲೇಖಕ–ಪತ್ರಕರ್ತ

ಕವಿ, ಕಥೆಗಾರ, ವಿಮರ್ಶಕ ಲೋಕೇಶ್ ಅಗಸಕಟ್ಟೆಯವರು ಹುಟ್ಟಿದ್ದು ದಾವಣಗೆರೆ ತಾಲ್ಲೂಕು ಅಗಸನಕಟ್ಟೆ ಎಂಬ ಪುಟ್ಟ ಗ್ರಾಮದಲ್ಲಿ 02–08–1958 ರಲ್ಲಿ.ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯದ ಗೀಳು ಹಚ್ಚಿಕೊಂಡು ಬೆಳೆದವರು. ಸಾಹಿತ್ಯ ಕ್ಷೇತ್ರದಲ್ಲಿ ಕಿರಿವಯಸ್ಸಿಗೆ ಹಿರಿಯ ಸಾಧನೆಗೈದು ಸಾಹಿತ್ಯಾಸಕ್ತರ ಗಮನ ಸೆಳೆದವರು. ಮತ್ತೆ ಸೂರ್ಯ ಬರುತ್ತಾನೆ, ಮನೆಯಂಗಳದ ಮರ, ಧರಣಿಯ ಧ್ಯಾನ, ಲೋಕೇಶ್ ಅವರ ಕವನ ಸಂಕಲನಗಳಾದರೆ, ಅಭಿಮುಖ, ಕನ್ನಡ ಕಾವ್ಯ: ಸಮಾಜ ಸಂಸ್ಕೃತಿ' (ಸಂಶೋಧನಾ ಕೃತಿ) ಒಳಗಿನ ಬೆಳಗು, ಸಾಂದರ್ಭಿಕ, ಕುಂವೀ ಕಥಾ ಸಾಹಿತ್ಯ ಇವು ವಿಮರ್ಶಾ ಸಂಕಲನಗಳು. "ನಮ್ಮೆಲ್ಲರ ಬುದ್ಧ" ನಾಟಕ. ಹಟ್ಟಿ ಎಂಬ ಭೂಮಿಯ ತುಣುಕು, ಕಥಾಸಂಕಲನ. ಲೋಕೇಶ್ ಅಗಸನಕಟ್ಟೆಯವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಹಲವು. ಛಂದ ಪುಸ್ತಕ ಪ್ರಶಸ್ತಿ, ಪ್ರಜಾವಾಣಿ ಕಥಾಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ, ಕನ್ನಡಪ್ರಭ ಪ್ರತಿಭೆಯ ಬಹುಮಾನ, ಕನ್ನಡ ಸಾಹಿತ್ಯ ಪರಿಷತ್ತು ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿರುವ ಇವರು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು ಹೌದು. ಇಸವಿ 2000ದಲ್ಲಿ ಚೀನಾ ಪ್ರವಾಸ ಮುಗಿಸಿ ಬಂದಿದ್ದಾರೆ. ಚಿತ್ರದುರ್ಗ ಸರ್ಕಾರಿ ಕಾಲೇಜಿನ ಸ್ನಾತಕೋತ್ತರ ವಿಭಾಗದಲ್ಲಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸಿ ಇದೀಗ ನಿವೃತ್ತಿ ಜೀವನದಲ್ಲಿ ತಮ್ಮ ಸಾಹಿತ್ಯ ಕೃಷಿಯಲ್ಲಿ ಕ್ರಿಯಾಶೀಲವಾಗಿರುವ ಇವರೊಂದಿಗೆ ಒಂದು ಸಂವಾದ.*

ಸರ್ ನಿಮ್ಮ ಬಾಲ್ಯ ವಿದ್ಯಾಭ್ಯಾಸ ನೆನಪಿಸಿಕೊಳ್ಳಿ

ನಾನು ಹಳ್ಳಿಯಲ್ಲೆ ಓದಿದ್ದು. ಗ್ರಾಮೀಣ ಪರಿಸರದಲ್ಲೇ ಜೀವನ ಆರಂಭವಾಯಿತು. ಹೆಚ್ಚು ಕಡಿಮೆ ಎಂ.ಎ.ಓದುವ ತನಕ ಗ್ರಾಮೀಣ ಶಾಲೆಗಳಲ್ಲಿ ಓದಿದೆ. ಆ ಕಾಲದ ನನ್ನ ತಲೆಮಾರಿನವರು ಹಳ್ಳಿಮಟ್ಟದ ಶಾಲೆಗಳಲ್ಲೆ ವಿದ್ಯೆ ಕಲಿಯುತ್ತಿದ್ದರು. ಆದರೆ ಆಗಿನ ಹಳ್ಳಿ ಶಾಲೆಗಳನ್ನು ಈ ಹೊತ್ತಿಗೆ ಹೋಲಿಕೆ ಮಾಡಿ ನೋಡಿದ್ರೆ, ಆ ಹೊತ್ತಿನ ಶಾಲೆಗಳೆ ಬಹಳ ಚನ್ನಾಗಿದ್ವು. ಮೇಷ್ಟುಗಳಿಗಾಗಲಿ ವಿದ್ಯಾರ್ಥಿಗಳಾಗಲಿ ಓದುವಿನಲ್ಲಿ ಆಸಕ್ತಿ ಇತ್ತು. ಹೀಗಾಗಿಯೇ ಪ್ರೈಮರಿಯಿಂದಿಡಿದು ಡಿಗ್ರಿವರೆಗೂ ಹಳ್ಳಿಗಳಲ್ಲೆ ಓದ್ಕೊಂಡು ಬಂದ್ವಿ. ಹೈಸ್ಕೂಲ್, ಪಿಯುಸಿ, ಪಕ್ಕದ ಆನಗೂಡು ಊರಿನಲ್ಲಿ ಓದಿದೆ. ಡಿಗ್ರಿ ಸಿರಿಗೆರೆಯ ಕಾಲೇಜಿನಲ್ಲಿ ಓದಿದೆ. ಎಂ. ಎ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾಡಿದೆ. ಆದ್ರೆ ಈವಾಗ ಬಹಳ ದೊಡ್ಡ ಸವಾಲುಗಳು. ಬಹುತೇಕ ನಮ್ಮ ತಲೆಮಾರಿನ ಎಜುಕೇಟೆಡ್ಸ್ ಅಂತ ಕರಿತಿವಲ್ವ, ಯಾರಿಗೂ ಜಾತಿ ಮತ ಪ್ರಶ್ನೆನೇ ಬರೊಲ್ಲ. ಆದರೆ ಇವತ್ತಿನ ಶಿಕ್ಷಣದಲ್ಲಿ ಅದು ಎದ್ದು ಕಾಣುತ್ತದೆ. ಆದ್ರೆ ನಮ್ಮ ತಲೆಮಾರಿನವರೆಲ್ಲ ಬಡತನ ಹಸಿವು ಮತ್ತು ಅವಮಾನಗಳಲ್ಲೆ ಬಂದವ್ರು. ಅವಾಗ ಏನಾಗಿತ್ತು ಅಂದ್ರೆ, ದುಡ್ಡು ಅನ್ನೊದು ಜನಗಳ ಬಳಿ ಇರಲೇ ಇಲ್ಲ.ನನಗೆ ನೆನಪಿರುವಂಗೆ ಈ ಬಾಟರ್ ಸಿಸ್ಟವಮ್ ನ್ನು ನನ್ನ ಕಣ್ಣಾರೆ ನೋಡಿದಂತವ್ನು ಗ್ರಾಮೀಣ ಮಟ್ಟದಲ್ಲಿ. ಅವ್ರು ಬೆಳೆದಿದ್ದು ಇವರಿಗೆ,ಇವ್ರು ಬೆಳೆದಿದ್ದು ಅವ್ರಿಗೆ ಮುಖ್ಯವಾಗಿ ಅವ್ರ ಹೊಲಗಳಲ್ಲಿ ಇವ್ರು ಹೋಗಿ ಕೆಲ್ಸ ಮಾಡ್ತಿದ್ರು ಇವ್ರ ಹೊಲಗಳಲ್ಲಿ ಅವ್ರು ಕೆಲ್ಸ ಮಾಡೋರು. ಕಾರಣ ಏನಂದ್ರೆ,

ಕೂಲಿ ದುಡ್ಡು ಕೊಡೋಕೆ ಇರ್ತಿರಲಿಲ್ಲ. ಅದಕ್ಕೆ ಇಷ್ಟು ದಿವಸ ನೀವು ನಮ್ಮ ಹೊಲದಲ್ಲಿ ಕೆಲ್ಸ ಮಾಡಿ ನಾವು ಅಷ್ಟೇ ದಿವಸ ನಿಮ್ಮ ಹೊಲದಲ್ಲಿ ಕೆಲ್ಸ ಮಾಡ್ತಿವಿ ಅಂತ ಒಪ್ಪಂದ ಮಾಡಿಕೊಳ್ತಾಯಿದ್ರು. ಈ ತರಹದಲ್ಲಿ ಆರ್ಥಿಕ ದುಸ್ಥಿತಿ ಇದ್ದ ಕಾಲದಲ್ಲಿ ಭವಿಷ್ಯಃ ಎಲ್ಲಿ ನೋಡಿದ್ರೂ ಬಡತನ ಕಾಣ್ತಿತ್ತು.ಹಳ್ಳಿಗಳಲ್ಲಿ ಒಬ್ರೊ ಇಬ್ರೊ ಶ್ರೀಮಂತ್ರು ಸಿಗೋರು ಅಷ್ಟೆ. ಹೀಗಾಗಿ ಇಡೀ ಊರು ಬಡತನದಲ್ಲಿ ಇರುತ್ತಿತ್ತು. ಹಂಗಾಗಿ ಜಾತಿ ಸಮಸ್ಯೆ ಇರುತ್ತಿರಲಿಲ್ಲ. ನನ್ನ ಬಾಲ್ಯದಲ್ಲಂತೂ ಜಾತಿನೇ ಕಾಣಲಿಲ್ಲ. ಆ ಜಾತಿ ಕೀಳು ಈ ಜಾತಿ ಮೇಲು ಅಂತ ಅನ್ಸಿಸ್ತನೇ ಇರಲಿಲ್ಲ. ಯಾಕೆಂದರೆ ಎಲ್ರೂ ಬಡವರೇ ಆಗಿದ್ರು. ಬಡತನಕ್ಕೆ ಜಾತಿ ಪ್ರಶ್ನೆನೇ ಬರೊಲ್ಲ. ಕ್ರಮೇಣ ಯಾವಾಗ ಆರ್ಥಿಕ ಸ್ಥಿತಿ ಸುಧಾರಣೆ ಆಯ್ತೊ ಅಧಿಕಾರ ಬೇಕಂತ ಶುರುವಾಯ್ತೊ ಇಂತಹ ಸಂದರ್ಭಗಳಲ್ಲಿ ಈ ಪ್ರಶ್ನೆಗಳು ಎದ್ದು ಕಾಣೋಕೆ ಶುರುವಾಗಿದ್ವು. ಹೀಗಾಗಿ ನನ್ನ ಬಾಲ್ಯದಲ್ಲಿ ಜಾತಿಗಳನ್ನು ವಿಂಗಡಿಸಿಕೊಂಡು ಬೆಳೆದ ಸಮಾಜದಲ್ಲಿ ನಾನು ಬೆಳೆಲೆ ಇಲ್ಲ. ಈ ಒಟ್ಟಾಗುವ ಸಮಾಜದಲ್ಲಿ ನಾನು ಬೆಳೆದು ಬಂದಿದ್ರಿಂದ, ಈಗ ಛಿದ್ರ ಛಿದ್ರವಾಗುತ್ತಿರುವ ಸಮಾಜವನ್ನು ನೋಡಿದ್ರೆ ಎಲ್ಲಿಂದ ಬಂತು ಇದೆಲ್ಲ ಅನಿಸುತ್ತೆ. ನಮ್ಮ ತಲೆಮಾರಿನ ಕಾಲದಲ್ಲಿ ಇಷ್ಟೊಂದು ರಾಜಕೀಯದ ಪ್ರಕ್ಷುಬ್ಧತೆ ಇರಲಿಲ್ಲ. ವಿದ್ಯಾರ್ಥಿಗಳಿಗಂತು ರಾಜಕಾರಣದ ಗಂಧಗಾಳಿ ಇರಲಿಲ್ಲ. ವಿದ್ಯಾರ್ಥಿ ಸಂಘಗಳಲ್ಲಿ ಚುನಾವಣೆ ನಡೆಯುತಿದ್ವು, ನಮಗೆ ಬೇಕಾದ ಪ್ರತಿನಿಧಿನ ನಾವೆ ಆಯ್ಕೆ ಮಾಡ್ತಿದ್ವಿ. ಅದನ್ನು ಬಿಟ್ರೆ ಓದೋದು ಅಷ್ಟೇ. ಮುಖ್ಯವಾಗಿ ಹೊಟ್ಟೆ ತುಂಬಿಸಿಕೊಳ್ಳೊದು ಹೇಗಂತ ಯೋಚನೆ ಮಾಡೋದು. ಆಸ್ಟಲ್ಗಳಲ್ಲಿ ಬೆಳಗ್ಗೆ ತಿಂಡಿಯಾದ್ರೆ ರಾತ್ರಿ ಊಟ ಅಷ್ಟೇ. ಈ ತರದ ಬಡತನ ಮತ್ತು ಹಸಿವಿನ ನಡುವೆಯೇ ಶಿಕ್ಷಣವನ್ನು ಪಡೆಯಬೇಕಾಗಿತ್ತು. ಹೀಗೆ ನನ್ನ ತಲೆಮಾರಿನೊಂದಿಗೆ ನಾನೂ ಅನುಭವಿಸಿಕೊಂಡು ಬಂದಂತವನು.

ನಿಮ್ಮ ತಂದೆ–ತಾಯಿ ಪ್ರೋತ್ಸಾಹ ಹೇಗಿತ್ತು?

ನನ್ನ ತಂದೆ ಬೇಗ ಸತ್ತೋಗಿಬಿಟ್ರು. ಸಾಯುವ ಕಡೆ ಕ್ಷಣದಲ್ಲಿ ನಮ್ಮ ತಂದೆ ನನ್ನ ತಾಯಿ ಕೈಯಿಡ್ಕೊಂಡು ಒಂದು ಮಾತು ಹೇಳಿದ್ರಂತೆ. "ಏನೇ ಕಷ್ಟವಾದ್ರೂ ನಮ್ಮ ಮಕ್ಕಳನ್ನು ಚನ್ನಾಗಿ ಓದಿಸೋದು ಬಿಡಬೇಡ" ಹಂಗಾಗಿ ನಮ್ಮ ತಾಯಿ ಏನೋ ನಮ್ಮನ್ನು ಹೊಡ್ದು ಬಡ್ದು ಏನೊ ಮಾಡಿ ಸ್ಕೂಲಿಗೆ ಕಳಿಸಿಬಿಡೋರು. ನಮ್ಮನ್ನು ಆಸ್ಟಲ್ಲಿಗೆ ಹಾಕಿದ್ರು, ಊರಿಗೆ ಏನಾದ್ರೂ ಹೋದ್ರೆ ಏಟು ಬಿದ್ವು ಅಂತಾನೆ ಲೆಕ್ಕ.ಅದಕ್ಕೆ ಹೆದರಿ ಊರಿಗೆ ಹೋಗ್ತ ಇರಲಿಲ್ಲ. ಅಮ್ಮನ ಭಯ ಇತ್ತು ನಮ್ಗೆ. ನಮ್ಮ ತಾಯಿ ನಾನು ಎಂ. ಎ. ಮಾಡೊತಂಕ ಬಹಳ ಸಪೋರ್ಟಿವಾಗಿದ್ರು. ನಾನು ನನ್ನ ಅಣ್ಣ ಎಂ.ಎ ಗೆ ಹೊರಟ್ವಿ. ಅವ್ನು ಒಂದು ವರ್ಷ ಪೇಲಾಗಿಬಿಟ್ಟ. ಇಬ್ರೂ ಎಂ.ಎ. ಗೆ ಹೋಗಬೇಕಿತ್ತು. ಆದ್ರೆ ಕಳಿಸೊ ಶಕ್ತಿ ಇರಲಿಲ್ಲ. ಏನು ಮಾಡೋದು ಅಂತ ಯೋಚಿಸುವಾಗ, ನಮ್ಮ ಅಮ್ಮ "ನಮ್ಮ ಹೊಲ ಐತೈಲ್ಲ ಅದ್ನ ಮಾರ್ಬಿಡೋಣ ಅಂತಂದ್ರು, ಇದೇ ನಿರ್ಧಾರ ಮಾಡಿ ಹೊಲನೂ ಮಾರಿ ನಮ್ಮನ್ನು ಓದೋದಕ್ಕೆ ಕಳಿಸಿಬಿಟ್ರು. ಅವತ್ತಿನ ನಾಲ್ಕು ಎಕರೆ ಹೊಲಕ್ಕೆ ಬರೀ ಆರು ಸಾವಿರ ರೂಪಾಯಿ. ಆ ಸಂದರ್ಭದಲ್ಲಿ ನಮ್ಮ ತಾಯಿ ಏನಾದ್ರೂ ನಮ್ಮ ಜಮೀನು ಹೋಗುತ್ತೆ ನೀವಿಬ್ರು ಹೊಲದ ಕೆಲ್ಸ ಮಾಡ್ಕೊಂಡು ಇರಿ ಅಂದಿದ್ರೆ, ನಾವು ಓದೋದಕ್ಕೆ ಆಗ್ತಾನೇ ಇರಲಿಲ್ಲ. ಹೀಗಾಗಿ ನಮ್ಮ ತಂದೆ ಕೊಟ್ಟ ಮಾತಿನಂತೆ ನಮ್ಮ ತಾಯಿ ನಮ್ಮ ಶಿಕ್ಷಣಕ್ಕೆ ತುಂಬಾ ಸಪೋರ್ಟ್ ಮಾಡಿದ್ರು.

ನಿಮಗೆ ಅಕ್ಷರ ಪ್ರೀತಿ ಸಾಹಿತ್ಯದ ನಂಟು ಹೇಗೆ ಶುರುವಾಯ್ತು ಸರ್?

ಡಿಗ್ರಿಯಲ್ಲಿದ್ದಾಗ್ಲೆ ಸಾಹಿತ್ಯದ ಆಸಕ್ತಿ ಬೆಳಿತು. ಆ ಸಂದರ್ಭದಲ್ಲಿ ಚಳವಳಿಗಳು ಶುರುವಾದವು. ಸಮುದಾಯ ಅಂತ ಶುರುವಾಗಿ ಪ್ರಸನ್ನ, ಗಂಗಾಧರಸ್ವಾಮಿ ಇವರೆಲ್ಲ ಸೇರಿ ಶುರುಮಾಡಿದ್ರು.ಕಲ

ಮತದಾರರ ಸಾಕ್ಷರತಾ ಸಂಘಗಳ ತರಬೇತುದಾರರ ತರಬೇತಿ

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತಿ, ಜಿಲ್ಲಾ ಸ್ವೀಪ್ ಸಮಿತಿ, ವಿಜಯಪುರ ಇವರ ಸಹಯೋಗದಲ್ಲಿ ಗುರುವಾರ ಜಿಲ್ಲಾ ಪಂಚಾಯತಿ, ಸಭಾ ಭವನದಲ್ಲಿ ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಹಿನ್ನೆಲೆಯಲ್ಲಿ ಭವಿಷ್ಯದ ಮತ್ತು ಯುವ ಮತದಾರರಿಗೆ ಮತದಾನ ಶಿಕ್ಷಣದ ಪ್ರಾಮುಖ್ಯತೆ ಜಾಗೃತಿ ಮತ್ತು ಅರಿವು ಮೂಡಿಸುವ ಸಂಬಂಧ ಶಾಲಾ, ಕಾಲೇಜು, ಕಾರ್ಯಾಲಯದ ಮುಖ್ಯಸ್ಥರುಗಳಿಗೆ ತಾಲೂಕ ಮಟ್ಟದ ಸಂಪನ್ಮೂಲ ತರಬೇತುದಾರರಿಗೆ ಒಂದು ದಿನದ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು.

ಈ ತರಬೇತಿಯ ಅತಿಥಿಗಳಾಗಿ ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿಗಳಾದ ಬಿ.ಎಸ್. ಮೂಗನೂರಮಠ್, ಯೋಜನಾ ನಿರ್ದೇಶಕರಾದ ಸಿ.ಆರ್.ಮುಂಡರಗಿ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವರು ಶಂಕರಗೌಡ ಸೋಮನಾಳ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರು ಎನ್.ಎಚ್.ನಾಗೂರ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರು ಡಾ.ಸಿ.ಕೆ.ಹೊಸಮನಿ, ಹಾಗೂ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರಾದ ಮಹಾದೇವಿ ಸೊನ್ನದ, ಇವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ತರಬೇತಿಯಲ್ಲಿ ಭಾಗವಹಿಸಿದ ಶಾಲಾ, ಕಾಲೇಜು, ಕಾರ್ಯಾಲಯದ ಮುಖ್ಯಸ್ಥರುಗಳಿಗೆ ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಹಿನ್ನೆಲೆಯಲ್ಲಿ ಭವಿಷ್ಯದ ಮತ್ತು ಯುವ ಮತದಾರರಿಗೆ ಮತದಾನ ಶಿಕ್ಷಣ ಪ್ರಾಮುಖ್ಯತೆ ಜಾಗೃತಿ ಮತ್ತು ಅರಿವು ಮೂಡಿಸುವ ಸಂಬಂಧ ಶಿಕ್ಷಾಣಾಧಿಕಾರಿಗಳು (ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ವಿಜಯಪುರ) ಡಾ. ಅಶೋಕ ಮಲಿಮ್ಕರ್ ಇವರು ಜಿಲ್ಲಾ ಮಟ್ಟದ ಸಮಗ್ರ ತರಬೇತಿ ಉಸ್ತುವಾರಿ ತಂಡದವರು ತರಬೇತಿಯನ್ನು ನೀಡಿದರು.

ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತಿ, ಜಿಲ್ಲಾ ಸ್ವೀಪ್ ಸಮಿತಿ, ವಿಜಯಪುರ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು, ತಾಲೂಕು ಪಂಚಾಯತ ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಎಲ್ಲ ಶಾಲಾ ಕಾಲೇಜುಗಳ ಶಿಕ್ಷಕರು, ಪ್ರಾಂಶುಪಾಲರು ಮತ್ತು ಉಪನ್ಯಾಸಕರು ತರಬೇತಿಯಲ್ಲಿ ಭಾಗವಹಿಸಿದರು.

ತಾಲ್ಲೂಕು ಮಟ್ಟದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಕೌನ್ ಬನೇಗಾ ವಿದ್ಯಾಧಿಪತಿ ಕಾರ್ಯಕ್ರಮ ಉದ್ಘಾಟನೆ

ಪಾಲಕರನ್ನು ಗೌರವಿಸಿದರೆ ಜೀವನ ಪಾವನ :ಶಾಸಕ ಯಶವಂತರಾಯಗೌಡ

ಉದಯರಶ್ಮಿ ನ್ಯೂಸ್

ಇಂಡಿ: ವಿದ್ಯಾರ್ಥಿಗಳು ಸತತ ಪರಿಶ್ರಮದಿಂದ ಒಳ್ಳೆಯ ಶಿಕ್ಷಣ ಪಡೆದುಕೊಳ್ಳಿ, ಪ್ರಪಂಚದ ಜೊತೆಗೆ ಸ್ಪರ್ಧೆಯಿದೆ. ಆದರೆ ಇದರ ಜೊತೆಗೆ ಸಂಸ್ಕಾರವಂತರಾಗಿ ನಿಮ್ಮ ಪಾಲಕರಿಗೆ ಗೌರವಿಸಿ, ಆಗ ಮಾತ್ರ ನಿಮ್ಮ ಜೀವನ ಪಾವನವಾಗುತ್ತದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅವರು ಬುಧವಾರ ಇಂಡಿ ಪಟ್ಟಣದ ಗುರುಭವನದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ, ಕ್ಷೇತ್ರ ಸಮನ್ವಯಾಧಿಕಾರಿ ಮತ್ತು ಶಿಕ್ಷಕರ ಸಂಘಟನೆಗಳ ಸಹ ಯೋಗದಲ್ಲಿ ತಾಲ್ಲೂಕು ಮಟ್ಟದ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಕೌನ್ ಬನೇಗಾ ವಿದ್ಯಾಧಿಪತಿ ಕಾರ್ಯಕ್ರಮವನ್ನು ಪ್ರಶ್ನೆಗೆ ಉತ್ತರ ನೀಡುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಪಠ್ಯದ ಜೊತೆಗೆ ಸಾಮಾನ್ಯ ಜ್ಞಾನ ಅಗತ್ಯವಾಗಿದೆ. ಮೊದಲು ಪಾಟೀಲ ಪುಟ್ಟಪ್ಪನವರು ಹೊರತರುತ್ತಿರುವ "ಪ್ರಪಂಚ"ಎನ್ನುವ ಪುಟ್ಟ ವಾರ ಪತ್ರಿಕೆ ಎಲ್ಲರಿಗೂ ಪ್ರಪಂಚದ ಜ್ಞಾನ ನೀಡುತ್ತಿತ್ತು ಎಂದು ಪಾಟೀಲ ಪುಟ್ಟಪ್ಪನವರನ್ನು

ನೆನಪಿಸಿಕೊಂಡರು.

ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಟಿ.ಆಲಗೂರ ಅವರ ನೇತೃತ್ವದಲ್ಲಿ ವಿದ್ಯಾರ್ಥಿಗಳಿಗೆ ಹೊಸ ಪ್ರಯೋಗವನ್ನು ಮಾಡಿ ಸಾಮಾನ್ಯ ಜ್ಞಾನ ಹೆಚ್ಚಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ ಎಂದರು.

ಉಪ ವಿಭಾಗಾಧಿಕಾರಿ ಅಬೀದ್ ಗದ್ಯಾಳ ಮಾತನಾಡಿ, ನಾವು ಇನ್ನೊಬ್ಬರ ಜೊತೆಗೆ ಸ್ಪರ್ಧಗೆ ಇಳಿಯದೇ ನಮ್ಮ ಜೊತೆಗೆ ನಾವೇ ಸ್ಪರ್ಧೆಗೆ ಇಳಿಯಬೇಕು, ಆಗ ಮಾತ್ರ ಜ್ಞಾನ ಹೆಚ್ಚಿಸಿಕೊಳ್ಳಲು ಸಾಧ್ಯವಿದೆ. ಪ್ರತಿಯೊಬ್ಬರಲ್ಲಿಯೂ ಸಾಮರ್ಥ್ಯ ಇರುತ್ತದೆ. ಅದನ್ನು ಸರಿಯಾಗಿ ಬಳಸಿಕೊಳ್ಳಬೇಕೆಂದರು.

ವಿಜಯಪುರ ಜಿಲ್ಲಾ ಪ್ರೌಢ ಶಾಲೆಗಳ ಅಧ್ಯಕ್ಷ ಶಿವರಾಜ ಬಿರಾದಾರ ಮಾತನಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಟಿ. ಎಸ್.ಆಲಗೂರ ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯಲ್ಲಿ ಎಸ್.ಎಸ್. ಹರಳಯ್ಯ, ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಆರ್.ನಡಗಡ್ಡಿ, ಎ. ಎಸ್.ಲಾಳಸೇರಿ, ಪ್ರಭು ಚಾಂದಕವಠೆ, ಸಂತೋಷ ಪಾಟೀಲ, ಎ.ಓ,ಹೂಗಾರ ಇದ್ದರು.

ಸಮನ್ವಯಾಧಿಕಾರಿ ಎಸ್. ಆರ್.ನಡಗಡ್ಡಿ ಸ್ವಾಗತಿಸಿದರು. ಬಸವರಾಜ ಗೊರನಾಳ ನಿರೂಪಿಸಿದರು.

ಮಾ.16ರಂದು ಕವಿಗೋಷ್ಠಿ & ಕಾವ್ಯ–ಕುಂಚ ಕಾರ್ಯಕ್ರಮ

ಉದಯರಶ್ಮಿ ನ್ಯೂಸ್

ಸಿಂದಗಿ: ಪಟ್ಟಣದ ಓಂ ಶಾಂತಿ ನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಮಾ.16ರಂದು ಸಾಯಂಕಾಲ 4:30ಗಂಟೆಗೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ 88ನೆಯ ತ್ರಿಮೂರ್ತಿ ಶೀವ ಜಯಂತಿ ಹಾಗೂ ಮಹಾಶಿವರಾತ್ರಿ ಪ್ರಯುಕ್ತ ಶಿವಸ್ಮೃತಿ ಕವಿಗೋಷ್ಠಿ ಹಾಗೂ ಕಾವ್ಯ–ಕುಂಚ ಕಾರ್ಯಕ್ರಮ ಹಾಗೂ ಮಾ.17ರಂದು ಬೆಳಿಗ್ಗೆ 09ಗಂಟೆಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಜರುಗಲಿವೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಪವಿತ್ರಾಜಿ ತಿಳಿಸಿದ್ದಾರೆ.

ಮಾ.16ರಂದು ನಡೆಯುವ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಸಿಂದಗಿ ಸಿಪಿಐ ನಾನಾಗೌಡ ಪೊಲೀಸಪಾಟೀಲ ಆಗಮಿಸಲಿದ್ದಾರೆ. ಅಧ್ಯಕ್ಷತೆಯನ್ನು ಆದರ್ಶ ವಿದ್ಯಾಲಯದ ಪ್ರಾಚಾರ್ಯ ಶಿವಪ್ಪಗೌಡ ಬಿರಾದಾರ ವಹಿಸಿಕೊಳ್ಳಲಿದ್ದಾರೆ. ಎಚ್.ಜಿ.ಕಾಲೇಜು ಉಪನ್ಯಾಸಕ ಸಿದ್ದಲಿಂಗ ಕಿಣಗಿ ಅವರಿಗೆ ಸನ್ಮಾನಿಸಲಾಗುವುದು. ಹಲವಾರು ಕವಿಗಳು ಕವನ ವಾಚನ ಮಾಡಲಿದ್ದಾರೆ. ಕಾವ್ಯ–ಕುಂಚ ಕಾರ್ಯಕ್ರಮ ಜರುಗಲಿದೆ.

ಮಾ.17ರಂದು ಜರುಗುವ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ತಾಲೂಕು ದಂಡಾಧಿಕಾರಿ ಪ್ರದೀಪಕುಮಾರ ಹಿರೇಮಠ ಆಗಮಿಸಲಿದ್ದಾರೆ. ಕಾರ್ಯಕ್ರಮದ ಸಾನಿಧ್ಯವನ್ನು ಪವಿತ್ರಾಜಿ ವಹಿಸಿಲಿದ್ದಾರೆ. ಆಲಮೇಲ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ರೇಣುಕಾ ಅಕ್ಕನವರು ಉಪನ್ಯಾಸ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಗ್ರೇಡ್–2 ತಹಶೀಲ್ದಾರ್ ಇಂದಿರಬಾಯಿ ಬಳಗಾನೂರ, ಡಾ.ಬಿ.ಜಿ.ಪಾಟೀಲ, ಸಾಹಿತಿ ಪಾರ್ವತಿ ದೇಸಾಯಿ, ಕಲಕೇರಿ ಪಿಎಸ್ಐ ರೋಹಿಣಿ ಪಾಟೀಲ, ಕೃಷಿ ಮಹಿಳೆ ಸುಮಂಗಲಾ ಬಿರಾದಾರ ಕಾರ್ಯಕ್ರಮದಲ್ಲಿ ಇರಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿವಿ ಕೋರ್ಸ್ಗೆ ಅರ್ಜಿ ಆಹ್ವಾನ

ಉದಯರಶ್ಮಿ ನ್ಯೂಸ್

ವಿಜಯಪುರ: ನಗರದಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪ್ರಾದೇಶಿಕ ಕೇಂದ್ರದಲ್ಲಿ ಪ್ರಸ್ತುತ 2023–24ನೇ(ಜನೆವರಿ ಆವೃತ್ತಿ) ಶೈಕ್ಷಣಿಕ ಸಾಲಿನ ಪ್ರವೇಶಾತಿ ಆರಂಭಗೊಂಡಿದ್ದು, ಸ್ನಾತಕ, ಸ್ನಾತಕೋತ್ತರ ಕೋರ್ಸ್ಗಳಿಗೆ ಅರ್ಜಿಯನ್ನು ಸಲ್ಲಿಸಲು ಮಾರ್ಚ್ 31ರ ವರೆಗೆ ಅವಕಾಶ ಕಲ್ಪಿಸಲಾಗಿದೆ.

ಬಿಎ, ಬಿಕಾಂ, ಬಿಬಿಎ, ಬಿಸಿಎ, ಬಿಎಸ್ಸಿ (ಐಟಿ), ಬಿಎಸ್ಸಿ (14 ಕಾಂಬಿನೇಷನ್ಸ್), ಬಿಎಸ್‌ಡಬ್ಲೂ, ಬಿಎಲ್ಐಸಿ, ಎಂಎ(14 ವಿಷಯಗಳು), ಎಂಕಾಂ, ಎಂಬಿಎ(8 ಕಾಂಬಿನೇಷನ್ಸ್), ಎಂಎಲ್ಐಸಿ, ಎಂಎಸ್ಸಿ(16 ವಿಷಯ), ಎಂಸಿಎ, ಎಂಎಸ್‌ಡಬ್ಲೂ, ಪಿಜಿ ಸರ್ಟಿಫಿಕೇಟ್ ಪ್ರೋಗ್ರಾಮ್ಸ್, ಡಿಪ್ಲೋಮಾ ಪ್ರೋಗ್ರಾಮ್ಸ್, ಮತ್ತು ಸರ್ಟಿಫಿಕೇಟ್ ಪ್ರೋಗ್ರಾಮ್ಸಗಳಿಗೆ ಪ್ರವೇಶಾತಿಯನ್ನು ಮಾಡಿಕೊಳ್ಳಲಾಗುತ್ತಿದೆ.

ಯುಜಿಸಿ ನಿಯಮಾವಳಿ ಪ್ರಕಾರ (ಭೌತಿಕ ಹಾಗೂ ರೆಗ್ಯುಲರ್) ಹಾಗೂ (ಓಪನ್ ಯೂನಿವರ್ಸಿಟಿ) ದಲ್ಲಿ ಪಡೆಯುವ ಶಿಕ್ಷಣಗಳೆರಡು ಒಂದೇ ಸಮನಾದ ಅರ್ಹತೆಯನ್ನು ಹೊಂದಿರುತ್ತದೆ.

ಆಸಕ್ತ ವಿದ್ಯಾರ್ಥಿಗಳು ಕರಾಮುವಿ ಅಧಿಕೃತ ವೆಬ್‌ಸೈಟ್ www.ksoumysure.ac.in ನಲ್ಲಿ ಕೋರ್ಸ್ಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿ ನಂತರ ಪ್ರಾದೇಶಿಕ ಕೇಂದ್ರಕ್ಕೆ ಖುದ್ದಾಗಿ ಭೇಟಿ ನೀಡಿ ಪ್ರವೇಶಾತಿಯನ್ನು ಪಡೆಯಬಹುದಾಗಿದೆ. ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ, ಡಿಫೆನ್ಸ್, ಹಾಗೂ ಮಾಜಿ ಸೈನಿಕ ವಿದ್ಯಾರ್ಥಿಗಳಿಗೆ ಆಟೋ/ಕ್ಯಾಬ್ ಚಾಲಕರು, ಅವರ ಮಕ್ಕಳಿಗೆ, ಕೆಎಸ್ಆರ್ಟಿಸಿ ನೌಕರರಿಗೆ ಭೋಧನಾ ಶುಲ್ಕದಲ್ಲಿ ರಿಯಾಯತಿ ಇರುತ್ತದೆ. ಕೋವಿಡ್–19 ಸಾಂಕ್ರಾಮಿಕ ರೋಗಕ್ಕೆ ತುತ್ತಾದ ಪೋಷಕರ ಮಕ್ಕಳಿಗೆ, ತೃತೀಯ ಲಿಂಗದ ವಿದ್ಯಾರ್ಥಿಗಳಿಗೆ, ದೃಷ್ಟಿಹೀನ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯತಿ ಇರುತ್ತದೆ. ಎಸ್ಸಿ, ಎಸ್ಟಿ ಮತ್ತು ಒಬಿಸಿ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳನ್ನು ಒದಗಿಸಿದಲ್ಲಿ ಸರ್ಕಾರದ ಎಸ್–ಎಸ್ಎಸ್ಟಿ ಮುಖಾಂತರ ವಿದ್ಯಾರ್ಥಿ ವೇತನವನ್ನು ಪಡೆಯಬಹುದು.

ವಿಜಯಪುರ ಪ್ರಾದೇಶಿಕ ಕೇಂದ್ರದಲ್ಲಿ ಎರಡನೇ ಮತ್ತು ನಾಲ್ಕನೇ ಶನಿವಾರ ಹಾಗೂ ರವಿವಾರದಂದು ಕೂಡಾ ಕಚೇರಿ ಕಾರ್ಯನಿರ್ವಹಿಸಲಿದೆ. ಹೆಚ್ಚಿನ ಮಾಹಿತಿಗಾಗಿ ಕರಾಮುವಿ ವಿಜಯಪುರ ಪ್ರಾದೇಶಿಕ ಕೇಂದ್ರ, ವಿಎಸ್.ಜಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಆವರಣ, ಆಕಾಶವಾಣಿ ಕೇಂದ್ರದ ಎದುರುಗಡೆ ರಿಂಗ್‌ರಸ್ತೆ ವಿಜಯಪುರ ಹಾಗೂ ಮೊಬೈಲ್ ಸಂಖ್ಯೆ: 9483628267, 9483980065, 7892550053, 9110256738ನ್ನು ಸಂಪರ್ಕಿಸಬಹುದು ಎಂದು ಕರಾಮುವಿ ಪ್ರಾದೇಶಿಕ ನಿರ್ದೇಶಕರಾದ ಮೈತ್ರಿ ಡಿ.ಎಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.18ರಂದು ಶಿಶಿಕ್ಷು ಮೇಳ

ಉದಯರಶ್ಮಿ ನ್ಯೂಸ್

ವಿಜಯಪುರ: ನಗರದ ಇಂಡಿ ರಸ್ತೆಯಲ್ಲಿರುವ ಬಿ ಎ ಬಿಜ್ಜರಗಿ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆ ಆವರಣದಲ್ಲಿ ದಿನಾಂಕ 18 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಶಿಶಿಕ್ಷು ಮೇಳವನ್ನು ಆಯೋಜಿಸಲಾಗಿದೆ.

ಐ.ಟಿ.ಐ ಪಾಸಾದ ಅಭ್ಯರ್ಥಿಗಳು Google link www.apprenticeshipindia.gov.in/candidate-registration ನೋಂದಾಯಿಸಿಕೊಂಡು ಬಾಗವಹಿಸಬಹುದಾಗಿದೆ. ಹಾಗೆಯೇ ಉದ್ದಿಮೆದಾರರು ಉಠಠಠಟಜ ಟುಟಿಇ ತಿತಿತಿ.ಚಿಠಿಠಿಡಿಜಟಿಣುಛಿಜ–ಛಿಖಿಟಿಜುಚಿ.ಠಠತ.ಎಟಿ/ಛಣಚಿಛಿ–ಟ್ಟಿಟಜಟಿಣ–ಡಿಜಛಿಣಡಿಚಿಣುಠಟಿ ನಲ್ಲಿ ನೋಂದಾಯಿಸಿಕೊಂಡು ಈ ಮೇಳದ ಪ್ರಯೋಜನೆ ಪಡೆದುಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9886437517, 9880121393 ಅಥವಾ ಹತ್ತಿರದ ಯಾವುದೇ ಸರ್ಕಾರಿ/ಅನಿದಾನಿತ/ಖಾಸಗಿ ಐ.ಟಿ.ಐ ಗಳನ್ನು ಸಂಪರ್ಕಿಸಬಹುದಾಗಿದೆ. ಆಸಕ್ತಿ ಅಭ್ಯರ್ಥಿಗಳು ನಾಲ್ಕು ಪ್ರತಿ ಸ್ವವಿವರದ ಮಾಹಿತಿಯೊಂದಿಗೆ ಶೈಕ್ಷಣಿಕೆ ದಾಖಲೆಗಳು ಮತ್ತು ಭಾವಚಿತ್ರದೊಂದಿಗೆ ಸದರಿ ಮೇಳಕ್ಕೆ ಹಾಜರಾಗಿ ಸದುಪಯೋಗ ಪಡೆದುಕೊಳ್ಳಬೇಕೆಂದು ದೇವರಹಿಪ್ಪರಗಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಡಿವ ನೀರಿನ ಸಮಸ್ಯೆ ನಿವಾರಣೆಗೆ ಕ್ರಮ : ಮಸಬಿನಾಳ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ವಾರ್ಡಿನ ಜನತೆಯ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ ಬೊರೆವೆಲ್ ಕೊರೆಸಲಾಗುತ್ತಿದೆ ಎಂದು ಪಟ್ಟಣ ಪಂಚಾಯಿತಿ ಸದಸ್ಯ ರಮೇಶ ಮಸಬಿನಾಳ ಹೇಳಿದರು.

ಪಟ್ಟಣದ ಹೊಸನಗರದಲ್ಲಿನ 13ನೇ ವಾರ್ಡಿನಲ್ಲಿ 2023–24ನೇ ಸಾಲಿನ 15ನೇ ಹಣಕಾಸು ಅಡಿಯಲ್ಲಿ ಗುರುವಾರ ಬೊರೆವೆಲ್ ಕೊರೆಯುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು.

ವಾರ್ಡಿನಲ್ಲಿ ಒಟ್ಟು 3 ಬೊರೆವೆಲ್ ಕೊರೆಸಲಾಗಿದೆ. ಇವುಗಳಲ್ಲಿ 2 ರಲ್ಲಿ ನೀರು ದೊರೆತಿದೆ. ಇನ್ನೂ ವಾರ್ಡಿನಲ್ಲಿ ಕಳೆದ 2 ವರ್ಷಗಳಲ್ಲಿ 7 ಸಿ.ಸಿ ರಸ್ತೆಗಳು, ಚರಂಡಿ ನಿರ್ಮಾಣ ಹಾಗೂ ಹಲವು ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ವಾರ್ಡಿನಲ್ಲಿ ಮನೆಗಳಿಗೆ ನಳಗಳ ಸಂಪರ್ಕ ನೀಡಲಾಗುತ್ತಿದೆ. ಆದರೆ ಮಹಿಳೆಯರು ಶೌಚಾಲಯ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಕುರಿತು ಮುಖ್ಯಾಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದರೆ ಅವರು ನಿರ್ಲಕ್ಷ ಮಾಡುತ್ತಿದ್ದು, ಮುಂದಿನ ದಿನಗಳಲ್ಲಿ ಶೌಚಾಲಯ ಕುರಿತು ಕ್ರಮ ಕೈಗೊಳ್ಳದೇ ಹೋದರೆ ಸ್ವತಃ ನಾನೇ ಪಟ್ಟಣ ಪಂಚಾಯಿತಿ ಮುಂದೆ ಧರಣಿ ಸತ್ಯಾಗ್ರಹ ನಡೆಸುತ್ತೇನೆ ಎಂದು ಮಾಹಿತಿ ನೀಡಿದರು.

ಈರಣ್ಣ ಒಂಟೆತ್ತಿನ, ಸದಯ್ಯ ಇಂಡಿ, ಸಲಬಯ್ಯ ಸದಯ್ಯನಮಠ, ಸುರೇಶ ಒಂಟೆತ್ತಿನ, ಮುತ್ತು ಜಾಲಗಾರ, ಬುಡ್ಡಾ ಬೇಪಾರಿ, ಮಂಜುನಾಥ ಒಂಟೆತ್ತಿನ, ಈರಯ್ಯ ಇಂಡಿಮಠ, ಯಾಸಿನ್ ಹಚ್ಯಾಳ, ಬಸವರಾಜ ಒಂಟೆತ್ತಿನ, ಶಂಕ್ರೆಪ್ಪ ಜಂಬಗಿ, ಅಪ್ಪಾಸಾಹೇಬ ವಾಡೇದಮನಿ ಸೇರಿದಂತೆ ಇತರರು ಇದ್ದರು.

ಸಂಗೀತಾ ಹುಲ್ಲೂರ ಅವರಿಗೆ ಪಿಎಚ್‌ಡಿ

ಉದಯರಶ್ಮಿ ನ್ಯೂಸ್

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಸಂಗೀತಾ ಹುಲ್ಲೂರ ಅವರು ಸಲ್ಲಿಸಿದ್ದ "ಎಫೆಕ್ಟ್ ಆಫ್ ಮೆಡಿಟೇಷನ್ ಆ್ಯಂಡ್ ಫಿಜಿಕಲ್ ಎಕ್ಸ್‌ಸೈಜಸ್ ಆನ್ ಸೈಕೋ–ಸೋಸಿಯೋಲಾಜಿಕಲ್ ಆ್ಯಂಡ್ ಫಿಜಿಯೋಲಾಜಿಕಲ್ ವೇರಿಯಬಲ್ಸ್ ಆಫ್ ಸ್ಪೋರ್ಟ್ಸ್‌ಮನ್" ಕುರಿತು ಸಲ್ಲಿಸಿದ್ದ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ.ಸಂಗೀತಾ ಹುಲ್ಲೂರ ಅವರು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ಪ್ರೊ. ಡಿ.ಎಂ. ಜ್ಯೋತಿ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ಸಂಗೀತಾ ಹುಲ್ಲೂರ ಅವರನ್ನು ಕುಲಪತಿ ಪ್ರೊ.ಬಿ.ಕೆ. ತುಳಸಿಮಾಲ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಂ. ಚಂದ್ರಶೇಖರ ಅಭಿನಂದಿಸಿದ್ದಾರೆ.

ಉದಯರಶ್ಮಿ
ಪ್ರತಿ ಮನೆ-ಮನದ ಸಂಗಾತಿ

ಕಾವ್ಯರಶ್ಮಿ

– ಡಿ ಎನ್ ಅನಿತಾ

("ನಮ್ಮ ಕಥಾ ಅರಮನೆ" ಬರಹಗಾರರು)

ಆಲಮಟ್ಟಿಯ ಚಂದ್ರಗಿರಿ ಜಾತ್ರಾ ಮಹೋತ್ಸವಕ್ಕೆ ಚಾಲನೆ । ಭಕ್ತರ ಭಕ್ತಿಭಾವದ ಪರಾಕಾಷ್ಠೆ

ಕೃಷ್ಣೆದಡದ ಶಕ್ತಿದೇವಿ ಚಂದ್ರಮ್ಮಾ ದರ್ಶನಕ್ಕೆ ಜನಸಾಗರ!

ಉದಯರಶ್ಮಿ ನ್ಯೂಸ್
ಸಂಪದಾ ಹಿರೇಮಠ

ಆಲಮಟ್ಟಿ: ಬೇಸಿಗೆಯ ಬಿರುಬಿಸಿಲು ಝಳ ಪ್ರಖರವಾಗುತ್ತಿದೆ. ಇತ್ತ ಕೃಷ್ಣಾನದಿಯ ಅಂಗಳು ಜೀವಜಲದಿಂದ ಸೊರಗುತ್ತಿದೆ. ಆದರೆ ಗುರುವಾರ ಕೃಷ್ಣೆಯ ದಡದಲ್ಲಿ ಜಲೋದ್ಭವದ ಬದಲು ಜನೋದ್ಭವದ ಜಯ ಉದ್ಘೋಷ್ ಹರಿದು ಬಂದಿದ್ದು ಕಂಡು ಬಂತು.ಈ ವೇಳೆ ಕೃಷ್ಣೆಯ ಜಲಧಿಯಲ್ಲಿ ಪವನಗೊಂಡ ಜನತೆಯ ಭಕ್ತಿಭಾವದ ಪರಾಕಾಷ್ಠೆ ತರ್ಪಣ ಅವಣೀಯವಾಗಿತ್ತು.ಎಲ್ಲೆಲ್ಲೂ ಭಕ್ತ ಮೊಗಗಳ ಕಲರವದ ಕಂಪು ನಿನಾದ ಮೊಳಗಿತ್ತು !!!

ಆಹಾ ! ಎತ್ತ ನೋಡಿದರು ಜನರೋ ಜನ. ಭಕ್ತಿರಸದ ಲೀಲೆಯಲ್ಲಿ ತನ್ಮಯ. ಆ ಜಾಗೃತ ದೇವಿಯ ಗುಂಗು ಪ್ರತಿಯೊಬ್ಬರ ಮನಭಾವದಲ್ಲಿ ನೆಲೆನಿಂತ ಪರಿಣಾಮ ಆರಾಧನಾ ಮಹೋತ್ಸವಕ್ಕೆ ನವಮೆರಗು ಬಂದಿತ್ತು. ಜಾತ್ರಾ ಉತ್ಸವದಲ್ಲಿ ಹರುಷದಿಂದ ಮಿಂದೆದ್ದ ಅಸಂಖ್ಯಾತ ಭಕ್ತ ಸಾಗರ ಧಾಮಿ9ಕ ಭಕ್ತಿಲೋಕದಲ್ಲಿ ತೇಲಿದರು...!

ಇಂಥದೊಂದು ದೃಶ್ಯ ವೈಭವಕ್ಕೆ ಗುರುವಾರ ಇಲ್ಲಿನ ಚಂದ್ರಗಿರಿಯ ಚಂದ್ರಮ್ಮಾ ದೇವಸ್ಥಾನದ ಅಂಗಳ ಸಾಕ್ಷಿಯಾಗಿತ್ತು !

ಅಪಾರ ಭಕ್ತ ಸಮೂಹವನ್ನು ಹೊಂದಿರುವ ಇಲ್ವಿನ ಚಂದ್ರಗಿರಿ ಚಂದ್ರಮ್ಮಾ ದೇವಿಯ ಜಾತ್ರಾ ಉತ್ಸವ ಇದೇ ಮಾ□□9 14 ಗುರುವಾರದಿಂದ ಶನಿವಾರದವರೆಗೆ ಮೂರು ದಿನಗಳ ಕಾಲ ಸಂಭ್ರಮ,ಸಡಗರದಿಂದ ನಡೆಯಲಿದ್ದು ಮೊದಲ ದಿನವೇ ಅಪಾರ ಸಂಖ್ಯೆಯಲ್ಲಿ ಭಕ್ತರು ಹರಿದು ಬಂದರು. ದೇವಿಯ ದರ್ಶನಕ್ಕೆ ಸರತಿ ಸಾಲಿನಲ್ಲಿ ನಿಂತು ಜಪತಪ ಮಾಡಿದರು. ಶಕ್ತಿದೇವತೆಯ ಸನ್ನಿಧಿಯಲ್ಲಿ ಉರುಳು ಸೇವೆಯ ಭಕ್ತಿ ಅರ್ಪಣೆ ಜೋರಾಗಿತ್ತು. ಹಲಬಗೆಯ ಹರಿಕೆ ತೀರಿಕೆಗಳ ಮಹಾಪೂರ ಸಾಂಗವಾಗಿ ಸಾಗಿತ್ತು !

ಕೃಷ್ಣಾ ನದಿತೀರದ ಜಾಗೃತ ಶಕ್ತಿದೇವತೆ ಎಂದೇ ಮನೆ ಮಾತಾಗಿ ಪ್ರಸಿದ್ಧಿ ಪಡೆದಿರುವ ಚಂದ್ರಗಿರಿಯ ಚಂದ್ರಮ್ಮದೇವಿ ಜಾತ್ರಾ ಮಹೋತ್ಸವಕ್ಕೆ ರಾಜ್ಯ,ಹೊರ ರಾಜ್ಯದ ಭಕ್ತರ ಮಹಾಪೂರವೇ ಆಗಮಿಸಿತ್ತು. ಮೊದಲ ದಿನ ರಾಜ್ಯದ ಮೂಲೆ ಮೂಲೆಗಳಿಂದ ಹಾಗು ನೆರೆಯ ರಾಜ್ಯಗಳಿಂದ ಅಪಾರ ಸಂಖ್ಯೆಯಲ್ಲಿ ಜನಸ್ತೋಮ ಇಲ್ಲಿ ಸೇರಿದ್ದು ಕಂಡುಬಂತು.ಸಾಕ್ಷಾತ್ ಚಾಮುಂಡೇಶ್ವರಿ ಅವತಾರಿಣಿ ಚಂದ್ರಮ್ಮನ ಸನ್ನಿಧಿಯಲ್ಲಿಂದು ಅಪಾರ ಸಂಖ್ಯೆಯಲ್ಲಿ ಭಕ್ತಗಣ ಸೇರಿತ್ತು. ಬೇಡಿದ ಭಕ್ತರಿಗೆ ವರವನ್ನು ನೀಡುವ ಐತಿಹ್ಯ ಹೊಂದಿರುವ ಚಂದ್ರಮ್ಮದೇವಿ ಈ ಭಾಗದ ಅಸಂಖ್ಯಾತ ಭಕ್ತಗಣದ ಆರಾಧ್ಯ ದೇವಿಯಾಗಿರು ಹಿನ್ನೆಲೆಯಲ್ಲಿ ದೇವಿಜಾತ್ರೆ ವರ್ಷದಿಂದ ವರ್ಷಕ್ಕೆ ವೈಭವಯುತ ಕಳೆ ಪಡೆಯುತ್ತಿದೆ. ದೇವಿಯ ಅಂಗಳದಲ್ಲಿ ಮುಸ್ಸಂಜೆ ಸಂಭ್ರಮ ಕಳೆಗಟ್ಟಿದೆ. ಬೆಳಗಿನ ಜಾವದಲ್ಲಿ ಚಂದ್ರಮ್ಮದೇವಿ ಗದ್ದುಗೆಗೆ ವಿಶೇಷ ಹೂ,ಪುಷ್ಪ,ಬಳೆಗಳಿಂದ ಅಲಂಕರಿಸಲಾಗಿತ್ತು. ಹಸಿರುಡುಗೆಯಲ್ಲಿ ಸಿಂಗರಿಸಿ ಕಂಗೊಳಿಸಿ ದೇವಿ ಭಕ್ತರ ದರ್ಶನಕ್ಕೆ ಲಭ್ಯವಾಗಿದ್ದಳು. ವಿಶೇಷ ಪೂಜೆ ಸೇರಿದಂತೆ ಧಾಮಿ9ಕ ಕೈಂಕರ್ಯದ ಸಾಂಪ್ರದಾಯಿಕ ಪೂಜಾ ವಿಧಿವಿಧಾನಗಳ ಕಾರ್ಯಗಳು ವಿಧಿವತ್ತಾಗಿ ನೆರವೇರಿಸಿ ಜಾತ್ರಾ ಉತ್ಸವಕ್ಕೆ ಚಾಲನೆ ನೀಡಲಾಗಿದೆ ಎಂದು ಚಂದ್ರಗಿರಿ ಧರ್ಮರ ಮಠದ ಧಮಾ9ಧಿಕಾರಿ ಸೋಮರಾವ ದೇಸಾಯಿ ತಿಳಿಸಿದರು.

ಬೆಳಗು ಮುಂಜಾನೆಯಿಂದಲೇ ಕೃಷ್ಣಾನದಿ ನೀರಿನಲ್ಲಿ ಮಿಂದು ದೇವಿಯ ದರ್ಶನಕ್ಕೆ ಜನ ಮುಗಿಬಿದ್ದಿದ್ದರು. ಉದ್ದನೆಯ ಸರತಿ ಸಾಲಿನಲ್ಲಿ ನಿಂತು ಆರಾಧಿಸುತ್ತಿದ್ದರು. ಬಳಿಕ ಚಂದ್ರಮ್ಮತಾಯಿ ದರ್ಶನ ಕಣ್ಣಂಚಿನಲ್ಲಿ ತುಂಬಿಕೊಂಡು ಪುನೀತ್ ಭಾವದ ಧನ್ಯತೆ ಮೆರೆದರು. ದೇವಸ್ಥಾನದ ಸುತ್ತಲೂ ಹರಿಕೆ ಹೊತ್ತ ಭಕ್ತರು ಹೆಣ್ಣು ಗಂಡು ಲಿಂಗಭೇದ ಎನ್ನದೇ ದೀರ್ಘದಂಡ ನಮಸ್ಕಾರದ ಉರುಳು ಸೇವೆ ಸಮಪಿ9ಸಿದರು. ಈ ದೃಶ್ಯ ವ್ಯಾಪಕ ಜನಸಂದಣಿಯ ಪಾದಸ್ಪರ್ಶದ ಅಂಚಿನಲ್ಲೇ ಯಥೇಚ್ಛವಾಗಿ ಸಾಗುತ್ತಿತ್ತು. ವಿಶಿಷ್ಟ ಭಕ್ತಿಸೇವೆಯಿಂದ ಜನ ಸಂತೃಪ್ತ ಭಾವ ತಾಳಿ ದೇವಿ ಧ್ಯಾನದಲ್ಲಿ ತೇಲಿದ್ದರು. ಭಕ್ತಿಯ ಲೀನತೆ ಮೆರೆದರು. ಕಲ್ಪವೃಕ್ಷವೆಂಬ ಪ್ರತೀತಿಯ ಚಂದ್ರಮ್ಮಾ ಮಾತೆಯ ದರ್ಶನಕ್ಕೆ ನೆರೆಯ ಗೋವಾ, ಮಹಾರಾಷ್ಟ್ರ, ಆಂದ್ರ, ತೆಲಂಗಾಣ ಸೇರಿದಂತೆ ಅಂತರರಾಜ್ಯಗಳ ಹಾಗೂ ರಾಜ್ಯದ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ವಯೋಬೇದವಿಲ್ಲದೇ,ಲಿಂಗಭೇದವಿಲ್ಲದೇ ಹರಿದು ಬರುವುದು ವಿಶೇಷ. ಗುರುವಾರ ಮೊದಲ ದಿನ ಇಲ್ಲಿ ಸಂಜೆವಾಗುತ್ತಲ್ಲೇ ಭಕ್ತರ ಸಂಖ್ಯೆಯಲ್ಲಿ ಏರಿಕೆವಾಗಿತ್ತು. ತಂಡೋಪತಂಡವಾಗಿ ಜನತೆ ಚಂದ್ರಮ್ಮಾ ತಾಯಿಯ ದಿವ್ಯ ದರ್ಶನ ಕಣ್ತುಂಬಿಸಿಕೊಳ್ಳಲ್ಲು ಇತ್ತ ಧಾವಿಸಿ ಬಂದರು.ಅಪಾರ ಭಕ್ತಾದಿಗಳ ದಂಡು ದೇಗುಲದ ಸುತ್ತ ನೆರದಿತ್ತು. ಇತಿಹಾಸ ಪ್ರಸಿದ್ಧ ಚಂದ್ರಮ್ಮಾ ದೇವಿಯ ಆರಾಧನಾ ಮಹೋತ್ಸವದ ಕಂಪು ಕೃಷ್ಣೆಯ ದಡದಲ್ಲಿಂದು ನಿವಿ9ಗ್ನವಾಗಿ ಮೊಳಗಿತ್ತು. ದೇಗುಲದ ಸುತ್ತ ಭಕ್ತರು ಪ್ರದಕ್ಷಿಣೆ ಹಾಕಿ ತಮ್ಮ ಇಷ್ಟಾರ್ಥವನ್ನು ಈಡೇರಿಸುವಂತೆ ಚಂದ್ರಮ್ಮ ತಾಯಿಯಲ್ಲಿ ಬೇಡಿಕೊಂಡರು. ಹುಂಡಿಗೆ ದಕ್ಷಣೆ ಹಾಕಿ,ದೇವಿಗೆ ನೈವೇದ್ಯ ಸಲ್ಲಿಸಿ, ದೀರ್ಘದಂಡ ನಮಸ್ಕಾರದೊಂದಿಗೆ ಭಕ್ತಿಪೂರ್ವಕ ವಿವಿಧ ಧಾಮಿ9ಕ ಪೂಜಾ ಕೈಂಕರ್ಯಗಳನ್ನು ಶ್ರದ್ಧೆ ಮನದ ತಪಸ್ಸಿನಿಂದ ಭಕ್ತರು ಸಮಪಿ9ಸಿದರು.

ಪ್ರಮುಖ ಬೀದಿಗಳಲ್ಲಿ ಭಕ್ತರ ಜನಸಂದಣಿ,ವಾಹನಗಳ ದಟ್ಟಣೆ ಹೇರಳವಾಗಿತ್ತು.ಜಾತ್ರೆ ಪ್ರಯುಕ್ತ ಸಾಲುಸಾಲು ತೆರೆಯಲ್ಪಟ್ಟಿದ ವಿವಿಧ ಮಳಿಗೆಗಳಲ್ಲಿ ವಿವಿಧ ಸ್ತರದ ಸಾಮಗ್ರಿಗಳ ವ್ಯಾಪಾರ ವಹಿವಾಟು ಜೋರಾಗಿತ್ತು.ವಿವಿಧ ಸಾಮಗ್ರಿಗಳ ಖರೀದಿಸಲು ಜನ ಉತ್ಸಾಹದಿಂದ ಮುಗಿಬಿದ್ದರು. ಸಿಹಿ ಪದಾರ್ಥಗಳ, ಗ್ರಹ ಬಳಿಕೆ ವಸ್ತುಗಳ ಮಳಿಗೆಗಳು, ತಿಂಡಿ ತಿನಿಸುಗಳ ಮಿಠಾಯಿ, ಹೋಟೆಲ್ ಗಳು,ಬ್ಯಾಗ್, ಬಳೆ ಫಲಪುಷ್ಪ, ಪೂಜಾ ಸಾಮಗ್ರಿ ಸೇರಿದಂತೆ ನೂರಾರು ಬಗೆಬಗೆ ಅಂಗಡಿಗಳು ತೆಲೆ ಎತ್ತಿವೆ. ರೈತಾಪಿ ಜನತೆಯ ಅಗತ್ಯ ವಸ್ತುಗಳ ಹಾಗು ಲಂಬಾಣಿ ಸಮೂದಾಯದ ಉಡುಗೆ ತೋಡುಗೆಯ ಬಟ್ಟೆಗಳ ಖರೀದಿಯಲ್ಲಿ ಜನ ಹೆಚ್ಚಿದ್ದರು. ವಿವಿಧ ಮನರಂಜನಾ ಪ್ರದರ್ಶನ, ಆಟೋಟಗಳ ಸ್ಟಾಟ್ ಗಳು, ಕಿವಿ ಕೊರೆಯುವ ಹಾಡುಗಳ ಸದ್ದುಗಳು ಜಾತ್ರೆಯಲ್ಲಿ ಮಾರ್ದನಿಸುತ್ತಿವೆ.



ಧಾಮಿ9ಕ ಸಂದೇಶ ಸಾರುತ್ತಿರುವ ಚಂದ್ರಮ್ಮದೇವಿ ಹಲವಾರು ಮಹತ್ವದ ಪ್ರಸಿದ್ಧಿ ಹೊಂದಿದಿದ್ದಾಳೆ. ಹೀಗಾಗಿ ಚಂದ್ರಮ್ಮ ತಾಯಿ ನಮ್ಮೆಲ್ಲರ ದುಃಖ ದುಮ್ಮಾನು ದೂರ ಮಾಡು,ಸಂತಸ,ನೆಮ್ಮದಿ ಕರುಣಿಸು, ಆರೋಗ್ಯಕರ ಜೀವನ ದಯಪಾಲಿಸು ಎಂದು ಪ್ರಾಥಿ9ಸಿ ಜನ ಚಂದ್ರಮ್ಮನ ದರ್ಶನಕ್ಕೆ ಭೇಟಿ ನೀಡಿ ದೇವಿ ಸನ್ನಿಧಿಯಲ್ಲಿ ಬಗೆಬಗೆಯ ಹರಕೆಗಳನ್ನು ತೀರಿಸುತ್ತಿದ್ದಾರೆ. ದೇವಾಲಯಲ್ಲಿ ವಿಶೇಷ ಪೂಜೆ, ಪ್ರಾರ್ಥನೆ,ಭಜನೆಯಂಥ ಹತ್ತಾರು ಕಾರ್ಯಕ್ರಮ ನಡೆಯುತ್ತಿವೆ. ದೇವಾಲಯದ ಒಳಾವರಣ,ಹೊರಾವರಣದ ಸುತ್ತ ಅಲಂಕಾರ ತಳಿರು ತೋರಣಗಳಿಂದ, ವಿದ್ಯುತ್ ದೀಪಾಲಂಕಾರದಿಂದ ಕಣ್ಮನ ಸೆಳೆಯುತ್ತಿದೆ.

ಭಕ್ತರ ಅನುಕೂಲಕ್ಕಾಗಿ ಸ್ಥಳೀಯ ಪೋಲಿಸರು ಸೂಕ್ತ ಬಂದೋಬಸ್ತ ಕೈಗೊಂಡಿದ್ದಾರೆ. ದೇವಸ್ಥಾನದ ಒಳಗೆ ಹೊರಗೆ ಕಣ್ಗಾವಲು ಈರಿಸಿದ್ದಾರೆ.

ಚಂದ್ರಗಿರಿಯ ಚಂದ್ರಮ್ಮಾದೇವಿ ದೇಗುಲ ಕೃಷ್ಣಾ ನದಿ ಹಿನ್ನೀರಿನ ಸನಿಹದಲ್ಲಿದೆ. ಈಗ ಬೇಸಿಗೆ ಬೇರೆ. ಮೇಲಾಗಿ ಜಾತ್ರೆ ಕೂಡಾ. ಜನರ ಓಡಾಟ ಹೆಚ್ಚುನದಿ ತೀರ ಮೊಸಳೆಗಳು ಅಗಾಗ ಗೋಚರಿಸುತ್ತವೆ. ಕಾರಣ ಜಾತ್ರೆಗೆ ಆಗಮಿಸುವ ಭಕ್ತಾದಿಗಳು ಬಲು ಹುಷಾರದಿಂದರಬೇಕು.ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಿ ಭಕ್ತರು ದೇವಿ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರಲಾಗಿದೆ.

ಮಾರುತೇಶ್ವರ ದೇಗುಲ ಕಾಮಗಾರಿಗೆ ಸಚಿವ ಶಿವಾನಂದ ಭೂಮಿಪೂಜೆ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ಪಟ್ಟಣದ ಹೃದಯ ಭಾಗದಲ್ಲಿರುವ ಮಾರುತೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯ ಮಾಡಬೇಕೆಂಬುವದು ಬಹುದಿನಗಳಿಂದ ಆಶೆ ನಮ್ಮದಾಗಿತ್ತು.ಎಲ್ಲಕ್ಕೂ ಕಾಲ ಕೂಡಿಬರಬೇಕು. ಈಗ ಕಾಲ ಕೂಡಿಬಂದಿದೆ. ಇದೀಗ ಇಲ್ಲಿನ ವಿಪ್ರಸಮಾಜ ಬಾಂಧವರು ಮುಂದೆ ಬಂದು ಮಾರುತೇಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕೆ ಮುಂದಾಗಿ ರೂ.75 ಲಕ್ಷ ಹಣ ಸಂಗ್ರಹ ಮಾಡಿರುವುದು ಶ್ಲಾಘನೀಯ ಎಂದು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಪಟ್ಟಣದ ಹೃದಯಭಾಗದಲ್ಲಿರುವ ಮೆಗಾಮಾರುಕಟ್ಟೆ ಪಕ್ಕದಲ್ಲಿರುವ ಮಾರುತೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗೆ ಬುಧವಾರ ಸಂಜೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈ ದೇವಸ್ಥಾನವು ಜಿಲ್ಲೆಯಲ್ಲಿಯೇ ವಿಶಿಷ್ಠ ದೇವಸ್ಥಾನವಾಗಿ ರೂಪಗೊಳ್ಳುವಂತೆ ನಿರ್ಮಾಣವಾಗಬೇಕು. ದೇವಸ್ಥಾನದ ಪಾವಿತ್ರ್ಯತೆ ಕಾಪಾಡುವ ಅಗತ್ಯವಿದೆ. ದೇವಸ್ಥಾನದ ನೀಲಿನಕ್ಷೆ ಸಿದ್ಧಗೊಳ್ಳುತ್ತಿದ್ದಂತೆ ರೂ.50 ಲಕ್ಷ ಅನುದಾನ ತಕ್ಷಣವೇ ನೀಡುವುದಾಗಿ ಭರವಸೆ ನೀಡಿದರು.

ಆರಂಭದಲ್ಲಿ ರೂ. 1.25 ಕೋಟಿ ವೆಚ್ಚದಲ್ಲಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯ ಆರಂಭವಾಗಲಿ. ಮುಂಬರುವ ದಿನಗಳಲ್ಲಿ ದೇವಸ್ಥಾನಕ್ಕೆ ಬೇಕಾದ ಅನುದಾನವನ್ನು ಕೊಡುವ ಭರವಸೆ ನೀಡಿದರು.

ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ ಮಾತನಾಡಿ, ಪಟ್ಟಣದಲ್ಲಿ ಅಭೂತಪೂರ್ಣವಾದ ಮಾರುತೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಕಾರ್ಯಕ್ಕೆ ಎಲ್ಲ ಸಮಾಜ ಬಾಂಧವರು ಕೈಗೂಡಿಸಬೇಕು. ಸಚಿವರು ದೇವಸ್ಥಾನ ನಿರ್ಮಾಣ ಕಾರ್ಯಕ್ಕೆ ಹೆಚ್ಚು ಸಹಾಯ–ಸಹಕಾರ ನೀಡಬೇಕೆಂದರು.

ಕಾರ್ಯಕ್ರಮದಲ್ಲಿ ಮಾರುತೇಶ್ವರ ದೇವಸ್ಥಾನ ಜೀರ್ಣೋದ್ಧಾರ ಕಮಿಟಿ ಅಧ್ಯಕ್ಷ ಲೋಕನಾಥ ಅಗರವಾಲ, ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಅನಿಲ ದೇಶಪಾಂಡೆ, ಕಾರ್ಯದರ್ಶಿ ಬಾಬು ಜೋಶಿ, ಮುಖಂಡರಾದ ಅನಿಲ ಅಗರವಾಲ, ಸಂಗಮೇಶ ಓಲೇಕಾರ, ಶಂಕರಗೌಡ ಬಿರಾದಾರ, ರವಿ ರಾಠೋಡ, ವಿಪ್ರ ಸಮಾಜ ಬಾಂಧವರಾದ ಅನಿಲ ದೇಶಪಾಂಡೆ, ಮುಕುಂದ ದೇಶಪಾಂಡೆ, ವಿನಾಯಕ ದೇಶಪಾಂಡೆ, ರಾಘವೇಂದ್ರ ಕುಲಕರ್ಣಿ, ಮಾಧವ ಕುಲಕರ್ಣಿ, ವಿಠ್ಠಲ ಕುಲಕರ್ಣಿ, ರಾಮಾಚಾರಿ ಯರ್ಜುವೇದಿ, ಅನಿಲ ಕುಲಕರ್ಣಿ, ವಾಸು ಕುಲಕರ್ಣಿ, ಕಿರಣ ಕುಲಕರ್ಣಿ, ಆರ್.ಡಿ.ಇನಾಮದಾರ, ಸಂಜೀವ ಕುಲಕರ್ಣಿ, ಪಿ.ಎಚ್.ಕುಲಕರ್ಣಿ, ರಾಘವೇಂದ್ರ ಕುಲಕರ್ಣಿ ಇತರರು ಇದ್ದರು. ಕೆ.ಪಿ.ಕುಲಕರ್ಣಿ ಸ್ವಾಗತಿಸಿ,ದೇವಸ್ಥಾನದ ಜೀರ್ಣೋದ್ಧಾರ ಕುರಿತು ಪ್ರಾಸ್ತವಿಕವಾಗಿ ಮಾತನಾಡಿ ನಿರೂಪಿಸಿದರು.

ಬಸ್ ನಿಲುಗಡೆಗೆ ಆಗ್ರಹಿಸಿ ಕರವೇ ಮನವಿ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ತಾಲೂಕಿನ ಕಣಕಾಲ ಗ್ರಾಮದ ಸ್ನೇಹ ಸದನ ಗೃಹಣಿ ಕೇಂದ್ರದ ಮುಂದೆ ಬಸ್ ನಿಲ್ಲಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಬಣದ ಕಾರ್ಯರ್ತರು ಬಸ್ ಡಿಪೋ ವ್ಯವಸ್ಥಾಪಕ ಪಿ.ಕೆ. ಜಾಧವ ಅವರಿಗೆ ಗುರುವಾರ ಮನವಿ ಸಲ್ಲಿಸಿದರು.

ಅವರು ಸಲ್ಲಿಸಿದ ಮನವಿಯಲ್ಲಿ ಬಸವನಬಾಗೇವಾಡಿ ಮಾರ್ಗದಿಂದ ಕಾನ್ನಾಳ ಗ್ರಾಮಕ್ಕೆ ಸಂಚರಿಸುವ ಬಸ್ ಗೃಹಣಿ ಕೇಂದ್ರ ಮುಂದೆ ಬಸ್ ನಿಲ್ಲಿಸುತ್ತಿಲ್ಲ. ಅಲ್ಲಿ ಸ್ನೇಹ ಸದನ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ, ನ್ಯೂ ಹೈಸ್ಕೂಲ್, ಮಡಿವಾಳೇಶ್ವರ ಪ್ರಾಥಮಿಕ ಶಾಲೆ ಹಾಗೂ ಸ್ನೇಹ ಸದನ ಶಾಲೆಯಲ್ಲಿ ಹಾಸ್ಟೇಲ್ ವ್ಯವಸ್ಥೆ ಹಾಗೂ ಯುವತಿಯರಿಗೆ, ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡಲಾಗುತ್ತದೆ. ದಿನಾಲೂ ನೂರಾರು ಮಹಿಳೆಯರು ಸ್ನೇಹ ಸದನ ಗೃಹಣಿ ಕೇಂದ್ರಕ್ಕೆ ಬರುತ್ತಾರೆ. ಈ ಕೇಂದ್ರ ಕಣಕಾಲ ಬಸ್ ತಂಗುದಾಣದಂದ 8 ನೂರು ಮೀಟರ್ ಅಂತರವಿದೆ. ಬಸ್ ತಂಗುದಾಣದಿಂದ ಮಹಿಳೆಯರು 8 ನೂರು ಮೀಟರ್ ನಡೆದುಕೊಂಡು ಈ ಗೃಹಣಿ ಕೇಂದ್ರಕ್ಕೆ ಬಂದು ಹೋಗಬೇಕು. ಇದೇ ಮಾರ್ಗವಾಗಿ ಬಸ್ ಮುಂದೆ ಹೋಗುವದರಿಂದ ಈ ಗೃಹಣಿ ಕೇಂದ್ರ ಮುಂದೆ ಬಸ್ ನಿಲುಗಡೆ ಮಾಡಿದರೆ ಮಹಿಳೆಯರಿಗೆ, ಶಾಲೆಯ ಮಕ್ಕಳಿಗೆ, ಶಿಕ್ಷಕರಿಗೆ ತುಂಬಾ ಅನುಕೂಲವಾಗುತ್ತದೆ. ಬಸ್ ವ್ಯವಸ್ಥಾಪಕರು ಸ್ನೇಹ ಸದನ ಗೃಹಣಿ ಕೇಂದ್ರ ಮುಂದೆ ಬಸ್ ನಿಲುಗಡೆಗೆ ಕ್ರಮ ವಹಿಸಬೇಕೆಂದು ತಿಳಿಸಲಾಗಿದೆ.



ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾ ಉಸ್ತುವಾರಿ ಅಧ್ಯಕ್ಷ ರಾಜಶೇಖರ ಹುಲ್ಲೂರ, ಜಿಲ್ಲಾ ಯುವ ಅಧ್ಯಕ್ಷ ಮಹಾಂತೇಶ ಚಕ್ರವರ್ತಿ, ತಾಲೂಕಾಧ್ಯಕ್ಷ ಸುನೀಲ ರಾಠೋಡ, ಉತ್ತರ ಕರ್ನಾಟಕ ಅಧ್ಯಕ್ಷ ಲಕ್ಷ್ಮಣ ಕಂಬಾಗಿ, ಜಿಲ್ಲಾ ಸಂಚಾಲಕ ಪ್ರಭು ಮಂಕಣಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ ಬಿದರಕುಂದಿ, ರಾಜ್ಯ ಸಮಿತಿ ಸದಸ್ಯ ಸಿದ್ದರಾಮ ಹಳ್ಳೂರ, ಮಹಿಳಾ ತಾಲೂಕಾಧ್ಯಕ್ಷೆ ಕಾವೇರಿ ಬಡಿಗೇರ, ನಗರ ಘಟಕದ ಅಧ್ಯಕ್ಷೆ ಭಾರತಿ ನಿಡಗುಂದಿ, ತಾಲೂಕಾ ಉಪಾಧ್ಯಕ್ಷ ಮಲ್ಲು ಕೋಲಕಾರ, ಜಿಲ್ಲಾ ಕಾರ್ಯದರ್ಶಿ ರಾಜು ಬಿರಾದಾರ ಇತರರು ಇದ್ದರು.

ಮುಳಸಾವಳಗಿಯಲ್ಲಿ ಸಿದ್ದೇಶ್ವರ ಶ್ರೀಗಳ ಗುರುನಮನ । ಆಧ್ಯಾತ್ಮಿಕ ಪ್ರವಚನ

ಕಾಯಕದಲ್ಲಿ ಚಿತ್ತಶುದ್ಧ ಮನವಿರಲಿ : ಅಮೃತಾನಂದ ಶ್ರೀ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ನಾವು ಮಾಡುವ ಯೋಗ್ಯ ಕೆಲಸವನ್ನು ಶ್ರದ್ಧೆ, ನಿಷ್ಠೆ, ಹಾಗೂ ಪ್ರಾಮಾಣಿಕತೆಯಿಂದ ಮಾಡಬೇಕು ಎಂದು ಬಾಲಗಾಂವ ಆಶ್ರಮದ ಅಮೃತಾನಂದಶ್ರೀ ಹೇಳಿದರು.

ತಾಲ್ಲೂಕಿನ ಮುಳಸಾವಳಗಿ ಗ್ರಾಮದಲ್ಲಿ ಗುರುವಾರ ಸಿದ್ದೇಶ್ವರ ಶ್ರೀಗಳ ಗುರುನಮನ ಕಾರ್ಯಕ್ರಮದ ಅಂಗವಾಗಿ ಜರುಗುತ್ತಿರುವ ಆಧ್ಯಾತ್ಮಿಕ ಪ್ರವಚನದಲ್ಲಿ ಪಾಲ್ಗೊಂಡು ಮಾತನಾಡಿದರು.

ಕಾಯಕವೇ ಕೈಲಾಸ ಎಂದರು ಬಸವೇಶ್ವರರು, ಅದರಂತೆ ನಡೆದರು ನಮ್ಮ ನಡೆದಾಡುವ ದೈವ ಸಿದ್ದೇಶ್ವರರು. ಕಾಯಕದಲ್ಲಿ ಚಿತ್ತಶುದ್ಧ ಮನಸ್ಸಿನಿಂದ ಪರಮಾತ್ಮನನ್ನು ಕಾಣಬೇಕು. ಆತನ ಕೃಪಾರ್ಶೀವಾದಕ್ಕೆ ಪಾತ್ರರಾಗಬೇಕು.



ಹಿಪ್ಪರಗಿಯ ಮಡಿವಾಳ ಮಾಚಿದೇವರು, ಶಿವಣಗಿಯ ನೂಲಿಯ ಚಂದಯ್ಯನವರ ಕಾಯಕ ನಿಷ್ಠೆಯನ್ನು ನಾವೆಲ್ಲರೂ ಅರಿತು, ನಮ್ಮ ಬದುಕಿನುದ್ದಕ್ಕೂ ಅಳವಡಿಸಿಕೊಂಡು ಕಾಯಕ ಜೀವಿಗಳಾಗಬೇಕಾಗಿದೆ. ಪ್ರಮುಖವಾಗಿ ಬದುಕಿನಲ್ಲಿ ಕೆಟ್ಟದ್ದನ್ನು ತಲೆಗೆ ಹಾಕಿಕೊಳ್ಳದೇ, ಕೆಟ್ಟದ್ದಕ್ಕೆ ನೀರು, ಗೊಬ್ಬರ ಹಾಕದೇ, ಕೆಟ್ಟದ್ದನ್ನು ಬಿಟ್ಟಾಕಿ ಸತ್ಕಾರ್ಯದಲ್ಲಿ ನಾವೆಲ್ಲರೂ ಪಾಲ್ಗೊಳ್ಳಬೇಕಾಗಿದೆ ಎಂದರು.

ಪ್ರತಿನಿತ್ಯ ಬೆಳಿಗ್ಗೆ 6 ಗಂಟೆಯಿಂದ 7 ಗಂಟೆಯವರೆಗೆ ಜರುಗುವ ಸತ್ಸಂಗ ಪ್ರವಚನ ಕಾರ್ಯಕ್ರಮದ ನಂತರ ಪ್ರಸ